# ತುಂಗ ಬಿಂಬ

ಸತ್ಯ ಮತ್ತು ಧೈರ್ಯದ ಧ್ವನಿ

TUNGA BIMBA | KANNADA DAILY MORNING | ಕನ್ನಡ ದಿನ ಪತ್ರಿಕೆ | RNI No: KARKAN/2023/86923

ಸಂಪುಟ: Vol: 04 | ಸಂಚಿಕೆ: Issue: 89 | ರಾಯಚೂರು Raichur | 21-09-2026 | ಸೋಮವಾರ Monnday | ಪುಟ: Page: 04 | ಬೆಲೆ: Price: ₹ 2.00 | Postal Reg No.: RCR/L/RNP/95/2025-27 | tungabimba@gmail.com | ಸಂಪಾದಕರು : ಗುರುರಾಜ ಕೆ | Editor: Gururaja K 98863 85685


ಟಾಟಾ ಸನ್ಸ್ ಅಧ್ಯಕ್ಷರಾಗಿ ಎನ್ ಚಂದ್ರಶೇಖರನ್ ಮರುನೇಮಕ ಪ್ರಶ್ನಿಸಿದ ಟಾಟಾ ಟ್ರಸ್ಟ್!



# ಪಕ್ಷ ಸಂಘಟನೆ ಬಲಪಡಿಸಿ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗೋಣ: ಎನ್.ಎಸ್. ಬೋಸರಾಜು

ರಾಯಚೂರು: ಜಿಲ್ಲಾ ಕಾಂಗ್ರೆಸ್ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ಕೆ. ಶಾಂತಪ್ಪ ಅವರು ಸುದೀರ್ಘ ರಾಜಕೀಯ ಅನುಭವ ಹೊಂದಿದ್ದು, ಪಕ್ಷದ ಎಲ್ಲ ಹಂತದ ಮುಖಂಡರು ಹಾಗೂ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘಟನೆಯನ್ನು ಇನ್ನಷ್ಟು ಬಲಪಡಿಸಬೇಕು ಎಂದು ಮಾಜಿ ಸಚಿವ ಎನ್.ಎಸ್. ಬೋಸರಾಜು ಹೇಳಿದರು. ಕೆ. ಶಾಂತಪ್ಪ ಅವರನ್ನು ಇತ್ತೀಚೆಗೆ ರಾಯಚೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.




ನಗರದ ಗಂಜ್ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಕೆ. ಶಾಂತಪ್ಪ ಅವರ ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಸಂಘಟನೆಯನ್ನು ಬೂತ್ ಮಟ್ಟದಿಂದಲೇ ಬಲಪಡಿಸಬೇಕಾಗಿದೆ. ಹಿರಿಯರು, ಯುವಕರು, ಮಹಿಳೆಯರು ಹಾಗೂ ಕಾರ್ಯಕರ್ತರೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿದಾಗ ಮಾತ್ರ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಲು ಸಾಧ್ಯ ಎಂದು ಬೋಸರಾಜು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ನೇಮಕ ಪ್ರಕ್ರಿಯೆ ಕುರಿತು ಮಾತನಾಡಿದ ಅವರು, ಪಕ್ಷದ ರಾಷ್ಟ್ರೀಯ ಹಾಗೂ ರಾಜ್ಯ ನಾಯಕತ್ವವು ಕಾರ್ಯಕರ್ತರು, ಸ್ಥಳೀಯ ಮುಖಂಡರು ಮತ್ತು ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅರ್ಹತೆ ಮತ್ತು ಸಂಘಟನಾ ಅನುಭವದ ಆಧಾರದಲ್ಲಿ ಜಿಲ್ಲಾಧ್ಯಕ್ಷರನ್ನು ನೇಮಿಸುವ ಪ್ರಕ್ರಿಯೆ ಅನುಸರಿಸಿದೆ ಎಂದು ಹೇಳಿದರು. ಕೆ. ಶಾಂತಪ್ಪ ಅವರು ಹಲವು ದಶಕಗಳಿಂದ ಕಾಂಗ್ರೆಸ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿರುವ ಅನುಭವ ಅವರಿಗೆ ಇದೆ. ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗುವ ಸಾಮರ್ಥ್ಯ ಹೊಂದಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಎ. ವಸಂತ ಕುಮಾರ ಮಾತನಾಡಿ, ಕಾಂಗ್ರೆಸ್ ಪಕ್ಷವು ದೀರ್ಘ ಇತಿಹಾಸ ಮತ್ತು ಸಂಘಟನಾ ಪರಂಪರೆ ಹೊಂದಿದ್ದು, ಕಾರ್ಯಕರ್ತರೇ ಪಕ್ಷದ ನಿಜವಾದ ಶಕ್ತಿ ಎಂದು ಹೇಳಿದರು. ಎ. ವಸಂತ ಕುಮಾರ ಅವರು ಪ್ರಸ್ತುತ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಾಧ್ಯಕ್ಷರಾಗಿದ್ದಾರೆ.

ನೂತನ ಜಿಲ್ಲಾಧ್ಯಕ್ಷ ಕೆ. ಶಾಂತಪ್ಪ ಮಾತನಾಡಿ, ತಮ್ಮ ರಾಜಕೀಯ ಪಯಣವನ್ನು ಸ್ಮರಿಸಿದರು. ರಾಜೇಂದ್ರ ಗಂಜ್‌ನಲ್ಲಿ ಗುಮಾಸ್ತನಾಗಿ ಕೆಲಸ ಆರಂಭಿಸಿ, ಯುವಕರ ಕ್ರೀಡಾ ಕ್ಲಬ್ ಮೂಲಕ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದೆ. ದಿವಂಗತ ಎಂ. ಈರಣ್ಣ ಅವರು ನನ್ನನ್ನು ರಾಜಕೀಯ ಕ್ಷೇತ್ರಕ್ಕೆ ಕರೆತಂದರು. ಅಂದಿನಿಂದ ಸುಮಾರು ನಾಲ್ಕು ದಶಕಗಳಿಂದ ಕಾಂಗ್ರೆಸ್ ಪಕ್ಷದೊಂದಿಗೆ ನಿರಂತರವಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರು.

ನಗರಸಭೆ ಸದಸ್ಯ, ಎಪಿಎಂಸಿ ಅಧ್ಯಕ್ಷ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದೇನೆ. ಪಕ್ಷದಲ್ಲಿ ಪದವಿ ಅಥವಾ ಹುದ್ದೆ ಸಿಗದ ಸಂದರ್ಭದಲ್ಲಿಯೂ ನಿರಾಶೆಯಾಗದೆ ಸಂಘಟನೆಗಾಗಿ ದುಡಿದಿದ್ದೇನೆ. ನಿಷ್ಠೆಯಿಂದ ಕೆಲಸ ಮಾಡುವ ಕಾರ್ಯಕರ್ತರಿಗೆ ಒಂದಲ್ಲ ಒಂದು ದಿನ ಪಕ್ಷದಲ್ಲಿ ಜವಾಬ್ದಾರಿ ದೊರೆಯುತ್ತದೆ ಎಂಬುದಕ್ಕೆ ತಮ್ಮ ನೇಮಕವೇ ಉದಾಹರಣೆ ಎಂದು ಹೇಳಿದರು.

"ನಾನು ಸದಾ ವೇದಿಕೆಯ ಮೇಲೆ ಕಾಣಿಸಿಕೊಂಡವನಿಗಿಂತ, ವೇದಿಕೆಯ ಹಿಂದೆ ನಿಂತು ಸಂಘಟನೆಯ ಕೆಲಸ ಮಾಡಿದವನು. ಈಗ ಪಕ್ಷ ನೀಡಿರುವ ಜಿಲ್ಲಾಧ್ಯಕ್ಷರ ಜವಾಬ್ದಾರಿಯನ್ನು ಎಲ್ಲರ ಸಹಕಾರದೊಂದಿಗೆ ನಿಭಾಯಿಸುತ್ತೇನೆ. ಹಿರಿಯ ನಾಯಕರ ಮಾರ್ಗದರ್ಶನ ಪಡೆದು, ಕಾರ್ಯಕರ್ತರ ಮನೆಬಾಗಿಲಿಗೂ ತೆರಳಿ ಅವರ ಅಭಿಪ್ರಾಯ ಕೇಳುತ್ತೇನೆ" ಎಂದು ಹೇಳಿದರು.

ಪಕ್ಷದಲ್ಲಿ ಭಿನ್ನಾಭಿಪ್ರಾಯಗಳು ಸಹಜವಾಗಿದ್ದರೂ, ಪಕ್ಷದ ಹಿತದ ಪ್ರಶ್ನೆ ಬಂದಾಗ ಎಲ್ಲರೂ ಒಂದಾಗಿ ಕೆಲಸ ಮಾಡಬೇಕು. ಹಿರಿಯರು ಮತ್ತು ಕಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘಟನೆಯನ್ನು ಮುನ್ನಡೆಸಲಾಗುವುದು. ವಿಶೇಷವಾಗಿ ಯುವ ಕಾರ್ಯಕರ್ತರಿಗೆ ಹೆಚ್ಚಿನ ಅವಕಾಶ ನೀಡಿ ಹೊಸ ನಾಯಕತ್ವ ಬೆಳೆಸುವತ್ತ ಗಮನ ಹರಿಸಲಾಗುವುದು ಎಂದು ಶಾಂತಪ್ಪ ತಿಳಿಸಿದರು.

ಕಾರ್ಯಕ್ರಮದಲ್ಲಿ ಹಂಪಯ್ಯ ನಾಯಕ ಸಾಹುಕಾರ್, ಬಸನಗೌಡ ಬಾದರ್ಲಿ, ಶರಣಪ್ಪ ಮಟ್ಟೂರು, ಮೊಹಮ್ಮದ್ ಶಾಲಂ, ರಾಮಣ್ಣ ಇರಬಗೇರಾ, ಮಲ್ಲಿಕಾರ್ಜುನ ಪಾಟೀಲ್, ಬಾಲಸ್ವಾಮಿ ಕೊಡ್ಲಿ, ಶ್ರೀದೇವಿ ನಾಯಕ, ಪವನ್ ಕುಮಾರ ಪಾಟೀಲ್, ಗಿರಿಯಪ್ಪ ನೆಲಹಾಳ ಸೇರಿದಂತೆ ಪಕ್ಷದ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಎಸ್‌ಸಿಎಸ್‌ಟಿ ರೈತರಿಗೆ 27 ಬೋರ್‌ವೆಲ್ ಪಂಪ್‌ಸೆಟ್ ವಿತರಣೆ; ನೀರಾವರಿ ಬಲವರ್ಧನೆಗೆ ಒತ್ತು: ದದ್ದಲ್



ರಾಯಚೂರು, ಸೆ.20: ರೈತರ ಕೃಷಿ ಚಟುವಟಿಕೆಗಳಿಗೆ ನೀರಾವರಿ ಸೌಲಭ್ಯವನ್ನು ಬಲಪಡಿಸುವ ಉದ್ದೇಶದಿಂದ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್ ಅವರ ಕಚೇರಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಬೋರ್‌ವೆಲ್ ಪಂಪ್ ಸೆಟ್‌ಗಳನ್ನು ವಿತರಿಸಲಾಯಿತು. ಬಸನಗೌಡ ದದ್ದಲ್ ಪ್ರಸ್ತುತ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾಗಿದ್ದಾರೆ.

ಕಾರ್ಯಕ್ರಮದಲ್ಲಿ ಪರಿಶಿಷ್ಟ ಪಂಗಡದ 15 ಹಾಗೂ ಪರಿಶಿಷ್ಟ ಜಾತಿಯ 12 ಫಲಾನುಭವಿಗಳು ಸೇರಿದಂತೆ ಒಟ್ಟು 27 ರೈತರಿಗೆ ಪಂಪ್‌ಸೆಟ್‌ಗಳನ್ನು ವಿತರಿಸಲಾಗಿದೆ ಎಂದು ಕಾರ್ಯಕ್ರಮದ ಆಯೋಜಕರು ತಿಳಿಸಿದ್ದಾರೆ.

ಫಲಾನುಭವಿ ರೈತರನ್ನು ಉದ್ದೇಶಿಸಿ ಮಾತನಾಡಿದ ಶಾಸಕ ಬಸನಗೌಡ ದದ್ದಲ್, ಕೃಷಿಗೆ ನೀರಾವರಿ ಅತ್ಯಂತ ಮುಖ್ಯವಾಗಿದ್ದು, ಬೋರ್‌ವೆಲ್ ಹೊಂದಿದ್ದರೂ ಸಮರ್ಪಕ ಪಂಪ್‌ಸೆಟ್ ಸೌಲಭ್ಯವಿಲ್ಲದ ರೈತರಿಗೆ ಇಂತಹ ಯೋಜನೆಗಳು ನೆರವಾಗಲಿವೆ. ಲಭ್ಯವಿರುವ ನೀರಿನ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಸಿಕೊಂಡು ಬೆಳೆ ಬೆಳೆಯಲು ಪಂಪ್ ಸೆಟ್‌ಗಳು ಅನುಕೂಲವಾಗಲಿವೆ ಎಂದು ಹೇಳಿದರು.

2018ರಿಂದ ಈವರೆಗೆ ರಾಯಚೂರು ಗ್ರಾಮೀಣ ಕ್ಷೇತ್ರದ ವಿವಿಧ ಸಮುದಾಯಗಳ ರೈತರಿಗೆ 1,000ಕ್ಕೂ ಅಧಿಕ ಬೋರ್‌ವೆಲ್ ಪಂಪ್‌ಸೆಟ್‌ಗಳನ್ನು ವಿತರಿಸಲಾಗಿದೆ ಎಂದು ಶಾಸಕರು ತಿಳಿಸಿದರು. ರೈತರ ಕೃಷಿ ಉತ್ಪಾದನೆ ಹೆಚ್ಚಿಸುವುದು, ನೀರಾವರಿ ಸೌಲಭ್ಯ ವಿಸ್ತರಿಸುವುದು ಹಾಗೂ ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಮಳೆ ಕೊರತೆಯಿಂದ ಈ ಬಾರಿ ಜಿಲ್ಲೆಯ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗಿದ್ದು, ರೈತರು ಬೆಳೆ ಉಳಿಸಿಕೊಳ್ಳಲು ಕಷ್ಟಪಡುವ ಪರಿಸ್ಥಿತಿ ಎದುರಾಗಿದೆ. ಇತ್ತೀಚಿನ ವರದಿಗಳ ಪ್ರಕಾರ ರಾಯಚೂರು ಜಿಲ್ಲೆಯ ತಾಲೂಕುಗಳನ್ನು

2ನೇ ಪುಟಕ್ಕೆ

## ಯಾವುದೇ ದುರ್ಘಟನೆಗಳು ನಡೆಯದಂತೆ ಜಿಲ್ಲಾಡಳಿತಕ್ಕೆ ಸಹಕರಿಸಿ: ಜಿಲ್ಲಾಧಿಕಾರಿ ಪೂವಿತಾ ಎಸ್.



ರಾಯಚೂರು ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯಲ್ಲಿ ಗಣೇಶ ವಿಸರ್ಜನೆ ಸಮಯದಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಎಲ್ಲ ಗಜಾನನ ಮಂಡಳಿಯವರು ಪಾಲಿಸುವ ಮೂಲಕ ಶಾಂತಿಯುತ ಹಾಗೂ ಯಾವುದೇ ದುರ್ಘಟನೆಗಳ ನಡೆಯದಂತೆ ನೋಡಿಕೊಳ್ಳುವ ಮೂಲಕ ಜಿಲ್ಲಾಡಳಿತಕ್ಕೆ ಸಹಕರಿಸಿಬೇಕೆಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ಹೇಳಿದರು.

ಸೆಪ್ಟೆಂಬರ್ 20ರ ರವಿವಾರ ದಂದು ನಗರದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶ್ರೀ ಗೌರಿ ಗಣೇಶ ವಿಸರ್ಜನೆ ಕುರಿತು ನಡೆದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದುರ್ಘಟನೆ ನಡೆದಂತೆ ಸುಮಾರು ಮೂರು-ನಾಲ್ಕು ತಿಂಗಳಿಂದ ಎಲ್ಲರೂ ಕಷ್ಟಪಟ್ಟು ಒಳ್ಳೆಯ ರೀತಿಯಲ್ಲಿ, ಚೆನ್ನಾಗಿ ಮತ್ತು ಭಿನ್ನವಾಗಿ ಉತ್ಸವವನ್ನು ನಡೆಸಲು ಶ್ರಮಿಸುತ್ತಿದ್ದಾರೆ. ಆದರೆ ದುರ್ಘಟನೆಗಳು ಸಂಭವಿಸಿದಾಗ ಎಲ್ಲರ ಮನಸ್ಸಿಗೂ ನೋವಾಗುತ್ತದೆ. ವಿಸರ್ಜನಾ ಮೆರವಣಿಗೆಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಟ್ರಾಕ್ಟರ್‌ಗಳನ್ನು ಬಳಸುವಾಗ ಅವುಗಳಲ್ಲಿ ಉತ್ತಮ ಡ್ರೈವರ್‌ಗಳನ್ನು ಹಾಕಿ, ಒಂದಕ್ಕಿಂತ ಹೆಚ್ಚು ಗಣಪತಿಯನ್ನು ಅದರ ಮೇಲೆ ಕೂರಿಸಬಾರದು ಎಂದು ಸಂಬಂಧಿಸಿದ ಗಣೇಶ ಮಂಡಳಿಯವರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಆರ್.ಟಿ.ಒ. ಹಾಗೂ ಸಾರಿಗೆ ಇಲಾಖೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪೊಲೀಸ್ ಇಲಾಖೆ ಹಾಗೂ ಕಾರ್ಪೊರೇಷನ್ ಇಲಾಖೆಗಳಿಗೆ ಈ ಕುರಿತು ಮಾಹಿತಿ ನೀಡಲಾಗಿದೆ. ದಯವಿಟ್ಟು ಯುವಕರು ಟ್ರಾಕ್ಟರ್ ಸುತ್ತಮುತ್ತ ಓಡಾಡುವುದು, ಮೆರವಣಿಗೆಯಲ್ಲಿ ಜೊತೆಯಾಗಿ ಸಾಗುವುದನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಮಕ್ಕಳನ್ನು ವಿಸರ್ಜನೆಗೆ ಕರೆದುಕೊಂಡು ಹೋಗುವಾಗ ಅವರ ಸುರಕ್ಷತೆಗೆ ಆದ್ಯತೆ ನೀಡಬೇಕು. ಸೌಂಡ್ ಸಿಸ್ಟಮ್ ಬಳಕೆಯಲ್ಲಿ ಸಾಮಾನ್ಯ ಸಮಯದಲ್ಲೂ ನಿಯಮಗಳನ್ನು ಪಾಲಿಸಬೇಕು. ಅತಿಯಾದ ಶಬ್ದದಿಂದ ವಯಸ್ಸಾದವರಿಗೆ ಮತ್ತು ರೋಗಿಗಳಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು. ಸಂಸ್ಕೃತಿ ಮತ್ತು ಕಲಾ ಪ್ರಕಾರಗಳಿಗೆ ತೊಂದರೆಯಾಗದಂತೆ,

2ನೇ ಪುಟಕ್ಕೆ

## ಗಣೇಶ ವಿಸರ್ಜನೆ ಮೆರವಣಿಗೆ ಹಗಲಲ್ಲೇ ನಡೆಯಲಿ: ಎ. ಪಾಪಾರೆಡ್ಡಿ ಮನವಿ



ರಾಯಚೂರು, ಸೆ.20: ಗಣೇಶೋತ್ಸವವು ಶ್ರದ್ಧೆ, ಭಕ್ತಿ ಹಾಗೂ ಸಾಂಸ್ಕೃತಿಕ ವೈಭವದೊಂದಿಗೆ ಯಾವುದೇ ಅವಘಡಗಳಿಗೆ ಅವಕಾಶವಿಲ್ಲದಂತೆ ನಡೆಯಬೇಕು. ಮಹಿಳೆಯರು, ಮಕ್ಕಳು ಹಾಗೂ ಸಾರ್ವಜನಿಕರು ಸುರಕ್ಷಿತವಾಗಿ ಪಾಲ್ಗೊಳ್ಳಲು ಗಣೇಶ ವಿಸರ್ಜನೆ ಮೆರವಣಿಗೆಗಳನ್ನು ಮುಂಜಾನೆ ಅಥವಾ ಹಗಲಿನ ವೇಳೆಯಲ್ಲೇ ಆರಂಭಿಸುವಂತೆ ಗಜಾನನ ಉತ್ಸವ ಸಮಿತಿಗಳು ಮುಂದಾಗಬೇಕು ಎಂದು ಮಾಜಿ ಶಾಸಕ ಎ. ಪಾಪಾರೆಡ್ಡಿ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಐದನೇ ದಿನದ ಗಣೇಶ ವಿಸರ್ಜನೆ ಮೆರವಣಿಗೆಯ ವೇಳೆ ಸಂಭವಿಸಿದ ಟ್ರ್ಯಾಕ್ಟರ್ ಅಪಘಾತದಲ್ಲಿ ಇಬ್ಬರು ಬಾಲಕರು ಮೃತಪಟ್ಟಿದ್ದು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಅತ್ಯಂತ ದುಃಖಕರವಾಗಿದೆ. ಈ ಘಟನೆ ಹಿನ್ನೆಲೆಯಲ್ಲಿ ಮುಂದಿನ ವಿಸರ್ಜನಾ ಮೆರವಣಿಗೆಗಳಲ್ಲಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

2ನೇ ಪುಟಕ್ಕೆ

## ಶ್ರೀಮಠದಲ್ಲಿ ಪ್ರೋಷ್ಠಪದಿ ಭಾಗವತ ಪ್ರವಚನಕ್ಕೆ ಚಾಲನೆ



ಮಂತ್ರಾಲಯ: ಶ್ರೀಕ್ಷೇತ್ರ ಮಂತ್ರಾಲಯದ ಶ್ರೀಮಠದಲ್ಲಿ ವಿದ್ವಾನ್ ಡಾ. ಎನ್. ವಾದಿರಾಜಾಚಾರ್ಯರಿಂದ ನಡೆಯಲಿರುವ ಪ್ರೋಷ್ಠಪದಿ ಭಾಗವತ ಪ್ರವಚನ ಕಾರ್ಯಕ್ರಮಕ್ಕೆ ಇಂದು ಭಕ್ತಿಭಾವದಿಂದ ಚಾಲನೆ ದೊರೆಯಿತು.

ಶ್ರೀಮಠದ ಪೀಠಾಧಿಪತಿ ಪರಮಪೂಜ್ಯ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ದೀಪ ಪ್ರಜ್ವಲನೆ ಮಾಡುವ ಮೂಲಕ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬಳಿಕ ಅನುಗ್ರಹ ಸಂದೇಶ ನೀಡಿದ ಶ್ರೀಗಳು, ಶ್ರೀಮದ್ಭಾಗವತದ ಪಾರಾಯಣ ಮತ್ತು ಪ್ರವಚನದಿಂದ ಭಕ್ತರಲ್ಲಿ ಧಾರ್ಮಿಕ ಚಿಂತನೆ, ಭಕ್ತಿ ಹಾಗೂ ಸನ್ಮಾರ್ಗದ ಅರಿವು ವೃದ್ಧಿಯಾಗುತ್ತದೆ ಎಂದು ಆಶೀರ್ವಚನ ನೀಡಿದರು.

ಪ್ರೋಷ್ಠಪದಿ ಭಾಗವತ ಪ್ರವಚನವು ಶ್ರೀಮಠದ ಧಾರ್ಮಿಕ ಪರಂಪರೆಯ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾಗಿದ್ದು, ಶ್ರೀಮದ್ಭಾಗವತದಲ್ಲಿರುವ ಭಕ್ತಿ, ಜ್ಞಾನ, ಧರ್ಮ ಹಾಗೂ ಜೀವನ ಮೌಲ್ಯಗಳನ್ನು ಭಕ್ತರಿಗೆ ಸರಳವಾಗಿ ತಲುಪಿಸುವ ಉದ್ದೇಶ ಹೊಂದಿದೆ. ವಿದ್ವಾನ್ ಡಾ. ಎನ್. ವಾದಿರಾಜಾಚಾರ್ಯರು ಭಾಗವತದ ವಿವಿಧ ಪ್ರಸಂಗಗಳು, ತಾತ್ವಿಕ ಸಂದೇಶಗಳು ಹಾಗೂ ಭಕ್ತಿಯ ಮಹತ್ವವನ್ನು ಪ್ರವಚನದ ಮೂಲಕ ವಿವರಿಸಲಿದ್ದಾರೆ.

2ನೇ ಪುಟಕ್ಕೆ

## ಕರ್ಕಶ ಡಿಜೆ ಬಳಸಿದರೆ ವಾಹನ ಸೀಜ್: ಎಸ್‌ಪಿ ಅರುಣಾಂಶು ಗಿರಿ ಎಚ್ಚರಿಕೆ



ರಾಯಚೂರು: ಮುಂಬರುವ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಕರ್ಕಶ ಧ್ವನಿಯ ಡಿಜೆ ಹಾಗೂ ನಿಯಮ ಮೀರಿ ಧ್ವನಿವರ್ಧಕಗಳನ್ನು ಬಳಸಿದರೆ ಸಂಬಂಧಿಸಿದ ಡಿಜೆ ವಾಹನಗಳನ್ನು ನಿರ್ದಾಕ್ಷಿಣ್ಯವಾಗಿ ಸೀಜ್ ಮಾಡಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಶು ಗಿರಿ ಖಡಕ್ ಎಚ್ಚರಿಕೆ ನೀಡಿದರು.

ನಗರದ ಸದರ್ ಬಜಾರ್ ಪೊಲೀಸ್ ಠಾಣೆಯಲ್ಲಿ ಗಣೇಶ ವಿಸರ್ಜನೆ ಹಿನ್ನೆಲೆಯಲ್ಲಿ ಸಮಾಜದ ಹಿರಿಯರು, ಗಣ್ಯರು ಹಾಗೂ ವಿವಿಧ ಗಣೇಶೋತ್ಸವ ಸಮಿತಿಗಳ ಪದಾಧಿಕಾರಿಗಳೊಂದಿಗೆ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ವಿಸರ್ಜನೆ ಸಂದರ್ಭದಲ್ಲಿ ಧ್ವನಿವರ್ಧಕಗಳ ಬಳಕೆಗೆ ಸಂಬಂಧಿಸಿದ ನ್ಯಾಯಾಲಯದ ಆದೇಶವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಿದರು.

ಗಣೇಶ ವಿಸರ್ಜನಾ ಮೆರವಣಿಗೆಯಲ್ಲಿ ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ರೀತಿಯಲ್ಲಿ ಅತಿಯಾದ ಶಬ್ದದ ಡಿಜೆ ಬಳಕೆಗೆ ಅವಕಾಶ ನೀಡಲಾಗುವುದಿಲ್ಲ. ನಿಗದಿತ ನಿಯಮಗಳ ವ್ಯಾಪ್ತಿಯಲ್ಲಿಯೇ ಧ್ವನಿವರ್ಧಕಗಳನ್ನು ಬಳಸಬೇಕು ಎಂದು ತಿಳಿಸಿದರು.

ನಂತರ ಕಲ್ಲಾನೆ ಗಜಾನನ ಸಮಿತಿಯವರೊಂದಿಗೆ ಮಾತನಾಡಿದ ಎಸ್‌ಪಿ ಅರುಣಾಂಶು ಗಿರಿ,

2ನೇ ಪುಟಕ್ಕೆ

## ಆಯುಷ್ ವೈದ್ಯರ ಬೇಡಿಕೆ ಈಡೇರಿಕೆಗೆ ಆಗ್ರಹ: ಸೆ.22ರಿಂದ ಅನಿರ್ದಿಷ್ಟಾವಧಿ ಮುಷ್ಕರ



ರಾಯಚೂರು, ಸೆ.20: ಆಯುಷ್ ವೈದ್ಯರ ವೃತ್ತಿಪರ ಹಕ್ಕು, ಸೇವಾ ಭದ್ರತೆ ಹಾಗೂ ಆರೋಗ್ಯ ಸೇವೆಯಲ್ಲಿ ಸಮರ್ಪಕ ಅವಕಾಶ ಕಲ್ಪಿಸುವುದು ಸೇರಿದಂತೆ ಬಹುದಿನಗಳ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಆಯುಷ್ ಫೆಡರೇಷನ್ ಆಫ್ ಇಂಡಿಯಾ ಕರ್ನಾಟಕ ಘಟಕದ ನೇತೃತ್ವದಲ್ಲಿ ಸೆ.22ರಿಂದ ಅನಿರ್ದಿಷ್ಟಾವಧಿ ಮುಷ್ಕರ ಹಾಗೂ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಲಾಗಿದೆ ಎಂದು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಡಾ. ಆನಂದ ಕಿರಿಶಾಳ ಹೇಳಿದರು.

ಭಾನುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ 32 ಘಟಕಗಳಿಂದ ಸಾವಿರಾರು ಆಯುಷ್ ವೈದ್ಯರು ರಾಯಚೂರಿನಲ್ಲಿ ನಡೆಯಲಿರುವ ರಾಯಚೂರು ಚಲೋ ಹೋರಾಟದಲ್ಲಿ ಭಾಗವಹಿಸಲಿದ್ದಾರೆ. ಆಯುಷ್ ವೈದ್ಯರ ವೃತ್ತಿಪರ ಹಕ್ಕುಗಳಿಗೆ ಸ್ಪಷ್ಟತೆ, ಸೇವಾ ಭದ್ರತೆ ಹಾಗೂ ಗ್ರಾಮೀಣ ಮತ್ತು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯಲ್ಲಿ ಅವರ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕೆಂಬುದು ಹೋರಾಟದ ಪ್ರಮುಖ ಉದ್ದೇಶವಾಗಿದೆ ಎಂದರು.

ಪ್ರಾಥಮಿಕ ಆರೋಗ್ಯ ಸೇವೆಯಲ್ಲಿ ಅನ್ವಯವಾಗುವ ಕಾನೂನು, ನಿಯಮ ಹಾಗೂ ಸರ್ಕಾರದ ಮಾರ್ಗಸೂಚಿಗಳ ವ್ಯಾಪ್ತಿಯಲ್ಲಿ ಆಯುಷ್ ವೈದ್ಯರಿಗೆ ಆಧುನಿಕ ಔಷಧಗಳ ಬಳಕೆಗೆ ಕಾನೂನುಬದ್ಧ ವ್ಯವಸ್ಥೆ ಕಲ್ಪಿಸಬೇಕು. ಸಂಬಂಧಿತ ರಾಷ್ಟ್ರೀಯ ಆಯೋಗಗಳ ಕಾಯ್ದೆಗಳು ಮತ್ತು ಗಜೆಟ್ ಅಧಿಸೂಚನೆಗಳ ಆಶಯಕ್ಕೆ ಅನುಗುಣವಾಗಿ ಆಯುಷ್ ವೈದ್ಯರ ವೃತ್ತಿಪರ ಹಕ್ಕುಗಳು ಹಾಗೂ ಸೇವಾ ಅವಕಾಶಗಳನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ

2ನೇ ಪುಟಕ್ಕೆ

## ರಾಜ್ಯದಲ್ಲಿ 20 ಲಕ್ಷ ಸದಸ್ಯತ್ವ ಗುರಿ: ಶಿವಸೇನಾ ಕರ್ನಾಟಕ ಸಂಘಟನೆ ಬಲವರ್ಧನೆಗೆ ಒತ್ತು



ರಾಯಚೂರು, ಸೆ.20: ರಾಜ್ಯಾದ್ಯಂತ ಶಿವಸೇನಾ ಕರ್ನಾಟಕ ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ಬಲಪಡಿಸುವ ಉದ್ದೇಶದಿಂದ ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ನಿಗದಿತ ಅವಧಿಯಲ್ಲಿ 20 ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿ ಹೊಂದಲಾಗಿದೆ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಗಂಗಾಧರ್ ಪ್ರಧಾನ ಕುಲಕರ್ಣಿ ಹೇಳಿದರು. ಸೆ.1ರಿಂದ 30ರವರೆಗೆ ರಾಜ್ಯವ್ಯಾಪಿ ಸದಸ್ಯತ್ವ ಅಭಿಯಾನ ನಡೆಸಿ 20 ಲಕ್ಷ ಸದಸ್ಯರನ್ನು ಸೇರ್ಪಡೆಗೊಳಿಸುವ ಗುರಿ ಹೊಂದಿರುವುದನ್ನು ಪಕ್ಷದ ಇತರ ರಾಜ್ಯ ಪದಾಧಿಕಾರಿಗಳೂ ಇತ್ತೀಚೆಗೆ ತಿಳಿಸಿದ್ದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ವಿವಿಧ ಜಿಲ್ಲೆ ಮತ್ತು ತಾಲೂಕುಗಳಲ್ಲಿ ಸಂಘಟನೆಯನ್ನು ವಿಸ್ತರಿಸಿ, ಕಾರ್ಯಕರ್ತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಚಟುವಟಿಕೆಗಳಿಗೆ ಜೋಡಿಸಲಾಗುವುದು ಎಂದರು.

ರಾಜ್ಯ ಸರ್ಕಾರದ ಆಡಳಿತ ವೈಫಲ್ಯ, ಭ್ರಷ್ಟಾಚಾರ, ನಿರುದ್ಯೋಗ ಹಾಗೂ ಪಕ್ಷದ ಪ್ರಕಾರ ಹಿಂದೂ ಸಮುದಾಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅನುಸರಿಸಲಾಗುತ್ತಿರುವ ನೀತಿಗಳ ವಿರುದ್ಧ ಹೋರಾಟ

2ನೇ ಪುಟಕ್ಕೆ

## ಗಣೇಶ ವಿಸರ್ಜನೆ ದುರಂತ: ಮೃತ ಬಾಲಕರ ಕುಟುಂಬಗಳಿಗೆ ಜಿಲ್ಲಾಧಿಕಾರಿ, ಎಸ್ಪಿ ಸಾಂತ್ವನ



ರಾಯಚೂರು, ಸೆ.20: ನಗರದ ಐದನೇ ದಿನದ ಗಣೇಶ ವಿಸರ್ಜನೆ ಮೆರವಣಿಗೆಯ ವೇಳೆ ಸಂಭವಿಸಿದ ದುರ್ಘಟನೆಯಲ್ಲಿ ಮೃತಪಟ್ಟ ಇಬ್ಬರು ಬಾಲಕರ ಮನೆಗಳಿಗೆ ಭಾನುವಾರ ಜಿಲ್ಲಾಧಿಕಾರಿ ಪೂವಿತಾ ಎಸ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಸಹಾಯಕ ಆಯುಕ್ತರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಇತ್ತೀಚೆಗೆ ನಡೆದ ಗಣೇಶ ವಿಸರ್ಜನೆ ಮೆರವಣಿಗೆಯ ಸಂದರ್ಭದಲ್ಲಿ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಬಾಲಕರು ಮೃತಪಟ್ಟಿದ್ದು, ಘಟನೆಯಿಂದ ಕುಟುಂಬಸ್ಥರು ತೀವ್ರ ದುಃಖದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳ ತಂಡ ಮೃತ ಬಾಲಕರ ಮನೆಗಳಿಗೆ ತೆರಳಿ ಪೋಷಕರು ಹಾಗೂ ಕುಟುಂಬ ಸದಸ್ಯರನ್ನು ಭೇಟಿ ಮಾಡಿ ಧೈರ್ಯ ತುಂಬಿತು.

ಘಟನೆಯ ಕುರಿತು ಕುಟುಂಬಸ್ಥರಿಂದ ಮಾಹಿತಿ ಪಡೆದ ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು, ಮಕ್ಕಳನ್ನು ಕಳೆದುಕೊಂಡ ಕುಟುಂಬಗಳ ದುಃಖದಲ್ಲಿ ಜಿಲ್ಲಾಡಳಿತವೂ ಭಾಗಿಯಾಗಿದ್ದು, ಸರ್ಕಾರ ಹಾಗೂ ಜಿಲ್ಲಾಡಳಿತದ ಮಟ್ಟದಲ್ಲಿ ಅಗತ್ಯ ಸಹಕಾರ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೂಡ ಕುಟುಂಬದ ಸದಸ್ಯರೊಂದಿಗೆ ಮಾತನಾಡಿ, ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯಿಂದ

2ನೇ ಪುಟಕ್ಕೆ

## ರಾಮಣ್ಣ ನಾಪತ್ತೆ ಪತ್ತೆಗೆ ಪೋಲಿಸರು ಮನವಿ



ಲಿಂಗಸುಗೂರು: ಪುರಸಭೆ ವ್ಯಾಪ್ತಿಯಲ್ಲಿ ಬರುವ ಕಸಬಾ ಲಿಂಗಸುಗೂರು ಗ್ರಾಮದ ರಾಮಣ್ಣ ತಂದೆ ದುರಗಪ್ಪ ವಯಸ್ಸು 80 ಜಾತಿ ಚಲುವಾದಿ ಕಸಬಾ ಲಿಂಗಸುಗೂರು ಗ್ರಾಮದ ನಿವಾಸಿಯಾಗಿದ್ದು ಇವರು ದಿನಾಂಕ 19 -9- 2026 ರಂದು ಬೆಳಿಗ್ಗೆ 11:30 ಗಂಟೆಗೆ ಕಸಬಾ ಲಿಂಗಸುಗೂರು ಗ್ರಾಮದಿಂದ ತಮ್ಮ ಮನೆಯಿಂದ ಹೊರಗಡೆ ಹೋಗಿ ಬರುತ್ತೇನೆ ಎಂದು ಹೇಳಿ ಹೋದವರು ವಾಪಸ್ ಮನೆಗೆ ಬಾರದೆ ಕಾಣೆಯಾಗಿದ್ದು ಪತ್ತೆ ಮಾಡಿಕೊಡಲು ಅವರ ಹಿರಿಯ ಸುಪುತ್ರ ರವೀಂದ್ರ ಸಲ್ಲಿಸಿದ ದೂರನ ಮೇರೆಗೆ ಲಿಂಗಸುಗೂರು ಪೊಲೀಸ್ ಠಾಣೆ ಗುನ್ನೇ ನಂಬರ್ 325/2026 ಪ್ರಕರಣ ದಾಖಲಿಸಿದ್ದಾರೆ.ಫೋಟೊದಲ್ಲಿರುವ ವ್ಯಕ್ತಿ ಪತ್ತೆಯಾದಲ್ಲಿ ಲಿಂಗಸೂರು ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಕೋರಲಾಗಿದೆ

ಪೊಲೀಸ್ ಇನ್ಸ್ಪೆಕ್ಟರ್ ಮೊಬೈಲ್ ನಂಬರ್ 9480803833 ಸಂಪರ್ಕಿಸುವಂತೆ ತಿಳಿಸಿದ್ದಾರೆ.

## ನರೇಗಾ ಯೋಜನೆ ಅವ್ಯವಹಾರ ತನಿಖೆಗೆ ಒತ್ತಾಯ ಡಿ ಎಸ್ ಎಸ್ ನಾಗವಾರ ಬಣ ಮನವಿ



ಲಿಂಗಸುಗೂರು: ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನಲ್ಲಿ ನರೇಗಾ ಯೋಜನೆ ಅನುಷ್ಠಾನದಲ್ಲಿ ನಡೆದಿರುವ ಅವ್ಯವಹಾರದ ತನಿಖೆ ನಡೆಸಬೆಕೆಂದು. ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ನಾಗವಾರ ಬಣ) ರಾಜ್ಯ ಸಂಘಟನಾ ಸಂಚಾಲಕರು ಪ್ರಭುಲಿಂಗ ಮೇಗಳಮನಿ ಅವರು ಪಟ್ಟಣದಲ್ಲಿ ನಡೆದ ಪ್ರಜಾ ಸೇವಾ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳು ಪೂನಿಯಾ ಅವರಿಗೆ ಮನವಿ ಪತ್ರ ಸಲ್ಲಿಸಿದರು.ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ನರೇಗಾ ಯೋಜನೆ ಅನುಷ್ಠಾನದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ತನಿಖೆ ನಡೆಸಲು ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರಿಗೆ ದೂರು ಸಲ್ಲಿಸಲಾಗಿತ್ತು.ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತನಿಖೆ ನಡೆಸಿ ವರದಿ ಸಲ್ಲಿಸಲು ಪತ್ರ ಬರೆದು ಇಂದಿಗೆ 3 ತಿಂಗಳು ಕಳೆದರು ಇಲ್ಲಿಯವರೆಗೆ ಯಾವುದೇ ತನಿಖೆ ನಡೆಸದೆ ಮೌನವಹಿಸಿರುವುದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ.ತನಿಖೆ ನಡೆಸಿ ತಪ್ಪಿಸ್ಥ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಹಾಗೂ ವಿಳಂಭ ನೀತಿ ಅನುಸರಿಸುತ್ತಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಕಾರ್ಯಾಲಯದ ಮುಂದೆ ಪ್ರತಿಭಟನೆ ಮಾಡಬೇಕಾಗುತ್ತೆ ಎಂದು ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

## ರಾಜ್ ಕಾಲುವೆಗೆ ಮೆಸ್ ಅಳವಡಿಸಲು ನಮ್ಮ ಕರವೇ ಒತ್ತಾಯ



ಲಿಂಗಸುಗೂರು:ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ 7 ನೇ ವಾರ್ಡಿನ ಬಸ್ ಸ್ಟ್ಯಾಂಡ ಪಕ್ಕದಲ್ಲಿರುವ ರಾಜ್ ಕಾಲುವೆ ನಾಲೆಗೆ ಮೆಸ್ ಅಳವಡಿಸುವಂತೆ ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಪಟ್ಟ ಣದಲ್ಲಿ ನೆಡೆದ ಪ್ರಜಾ ಸೇವಾ ಕಾರ್ಯ ಕ್ರಮದಲ್ಲಿ ಪುರಸಭೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.ಪಟ್ಟಣದಲ್ಲಿನ ಸಾರ್ವಜನಿಕ ನಾಗರೀಕರು ಕಸ ಕೋಳಿಯ ತಾಜಾ ಮಾಂ ಸದ ಅಂಗಡಿಗಳ ತ್ಯಾಜ್ಯ ಹಾಗೂ ಖಾನಾ ವಳಿಯ ತ್ಯಾಜ್ಯ ಹಾಗೂ ನೀರನ್ನು ಈ ಕಾಲುವೆಗೆ ಹಾಕುತ್ತಿದ್ದಾರೆ.ಹೃದಯ ಭಾಗದಲ್ಲಿ ರುವ ಬಸ್ಸ್ ನಿಲ್ದಾಣದ ಪಕ್ಕದಲ್ಲಿರುವ ಸಾರ್ವಜನಿಕ ನಾಗರೀಕರಿಗೆ ತುಂಬಾ ತೊಂದರೆ ಆಗಿದ್ದು ಕಾಲವೆಗೆ ಸೇತುವೆಯ ಮೇಲೆ ಹಾಗೂ ಪಕ್ಕದಲ್ಲಿ 10 ಅಡಿ ಮೆಸ್ ಅಳವಡಿಸಬೇಕು ಕಾಲುವೆಗೆ ಮೆಸ್ ಅಳವಡಿಸಿದರೆ ಕಸ ಕಡ್ಡಿಗಳನ್ನು ಹಾಕುವುದಿಲ್ಲ ಮತ್ತು ತಾಜ್ಯವನ್ನು ಇಲ್ಲೆ ಹಾಕುವದರಿಂದ ತುಂಬಾ ಕೆಟ್ಟ ವಾಸನೆ ಯಿಂದ ಕೂಡಿ ರೋಗ ರುಜಿನಿಗಳು ಬರುತ್ತಿದ್ದು ಜೊತೆಗೆ ರಾಜ ಕಾಲುವೆಯ ಹಂದಿಗಳ ವಾಸ್ತವ್ಯವಾಗಿದ್ದು ಸಾಕಷ್ಟು ಸೊಳ್ಳೆಗಳು ಕೂಡಿವೆ ಇಲ್ಲಿ ಕಸ ಹಾಕುವದರಿಂದ ಮುಂದಕ್ಕೆ ನೀರು ಹರಿ ದು ಹೋಗದೇ ಆಣೆಕಟ್ಟೆಯಲ್ಲಿ ನಿಂತ ಹಾಗೆ ತುಂಬಾ ಕೊಳಚೆ ನೀರು ನಿಲ್ಲುತ್ತಿದೆ.ರಾಜ ಕಾಲುವೆಗೆ ಎಡ ಮತ್ತು ಬಲಬದಿಯಲ್ಲಿ 10 ಅಡಿ ಮೆಸ್ ಗಳನ್ನು ಅಳವಡಿಸಿದರೆ ಯಾರು ಕಸ ಹಾಕುವುದಿಲ್ಲ ರಾಷ್ಟ್ರೀಯ ಹೆದ್ದಾರಿ ಆಗಿರುದರಿಂದ ಸಂಚರಿಸುವವ ರೆಗೂ ತುಂಬಾ ತೊಂದರೆ ಆಗಿದ್ದು ಆದಷ್ಟು ಬೇಗನೇ ಸಮಸ್ಯೆ ಯನ್ನು ಬಗೆಹರಿಸಬೇಕು ಎಂದು ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.ಈ ಸಂದರ್ಭದಲ್ಲಿ ನಮ್ಮ ರಕ್ಷಣಾ ವೇದಿಕೆ ತಾಲೂಕ ಅಧ್ಯಕ್ಷ ತಿಮ್ಮಾರೆಡ್ಡಿ ಮುನ್ನೂರು, ಯಲ್ಲಪ್ಪ ಬಂಡಿ,ಶರಣಪ್ಪ ಅಂಗಡಿ,ಇದ್ದರು.

ಅಮೃತ ವಾಣಿ

ಚಿನ್ನವೇ ಶ್ರೇಷ್ಠ
ಎಂದುಕೊಂಡವನಿಗೆ
ವಜ್ರವಿರುವುದು ತಿಳಿಯದು.

1592 ನೇಯ ದಿನಕ್ಕೆ
ಏಮ್ಸ್
ಹೋರಾಟ

## ಕಾದಂಬರಿಕಾರ್ತಿ ಜಿ.ಎಂ. ರಾಜೇಶ್ವರಿಗೆ ದತ್ತಿ ಪ್ರಶಸ್ತಿ ಪ್ರದಾನ



ರಾಯಚೂರು, ಸೆ.20: ನಗರದ ಕನ್ನಡ ಭವನದಲ್ಲಿ ಭಾನುವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೊಪ್ಪಳ ಜಿಲ್ಲೆಯ ಕಾರಟಗಿ ಮೂಲದ ಕಾದಂಬರಿಕಾರ್ತಿ ಜಿ.ಎಂ. ರಾಜೇಶ್ವರಿ ಅವರಿಗೆ 2026-27ನೇ ಸಾಲಿನ ದತ್ತಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಜಿ.ಎಂ. ರಾಜೇಶ್ವರಿ, ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ತಮ್ಮ ಸಾಹಿತ್ಯ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು ಅತ್ಯಂತ ಸಂತೋಷ ತಂದಿದೆ ಎಂದು ಹೇಳಿದರು.

ತಮ್ಮ ಕಾದಂಬರಿಗಳಲ್ಲಿ ಮಹಿಳೆಯ ತಾಳ್ಮೆ, ಸಮಾಧಾನ, ಬದುಕಿನ ಸಂಕಷ್ಟಗಳು ಹಾಗೂ ಅವುಗಳನ್ನು ಎದುರಿಸುವ ಮನೋಭಾವವನ್ನು ಚಿತ್ರಿಸಲು ಪ್ರಯತ್ನಿಸಿದ್ದೇನೆ. ಹಿರಿಯ ಸಾಹಿತಿಗಳ ಕಾದಂಬರಿಗಳಿಂದ ಸ್ಫೂರ್ತಿ ದೊರೆತಿದ್ದರೂ, ಎಲ್ಲಕ್ಕಿಂತ ಹೆಚ್ಚಾಗಿ ಬದುಕಿನ ಹೋರಾಟವೇ ತಮ್ಮ ಬರವಣಿಗೆಗೆ ಪ್ರಮುಖ ಪ್ರೇರಣೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಡಾ. ವಸುಂಧರಾ ಪಾಟೀಲ್ ಅವರು ಜಿ.ಎಂ. ರಾಜೇಶ್ವರಿ ಅವರ ಸಾಹಿತ್ಯ ಸಾಧನೆ ಕುರಿತು ಅಭಿನಂದನಾ ನುಡಿಗಳನ್ನಾಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮಹಾಂತೇಶ್ ಮಸ್ಕಿ, ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಸುಗುಣ ಸಿದ್ದನಗೌಡ, ರಾಯಚೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ವಿಜಯ ರಾಜೇಂದ್ರ ಹಾಗೂ ಜಿಲ್ಲಾ ಕಸಾಪ ಕಾರ್ಯದರ್ಶಿ ತಾಯಪ್ಪ ಬಿ. ಹೊಸೂರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಂಜುನಾಥ್ ಕಾಮಿನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಸಾಪ ಸದಸ್ಯ ವಸಂತಕುಮಾರ ಕಾರ್ಯಕ್ರಮ ನಿರೂಪಿಸಿದರು. ದಂಡಪ್ಪ ಬಿರಾದಾರ್ ಸ್ವಾಗತಿಸಿದರು. ವೈ.ಕೆ. ಯಶೋಧ ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಹ ಕಾರ್ಯದರ್ಶಿಗಳಾದ ವೆಂಕಣ್ಣ ಯಾದವ್, ನಾಗಪ್ಪ ಹೊರಪೇಟಿ, ವಿ.ಎನ್. ಅಕ್ಕಿ, ರಾವುತರಾವ್ ಬರೂರ, ಪ್ರತಿಭಾ ಗೋನಾಳ ಸೇರಿದಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ಸದಸ್ಯರು ಹಾಗೂ ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು.

## 12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ರಾಮಣ್ಣ ಹವಳೆ ಆಯ್ಕೆ



ರಾಯಚೂರು, ಸೆ.20: ನಗರದ ಕನ್ನಡ ಭವನದಲ್ಲಿ ಭಾನುವಾರ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಕ್ಟೋಬರ್ 24 ಮತ್ತು 25ರಂದು ನಡೆಯಲಿರುವ 12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಜಿಲ್ಲೆಯ ಹಿರಿಯ ಸಾಹಿತಿ ರಾಮಣ್ಣ ಹವಳೆ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಮ್ಮೇಳನದ ಸರ್ವಾಧ್ಯಕ್ಷರ ಆಯ್ಕೆ ಕುರಿತು ವಿಸ್ತೃತ ಚರ್ಚೆ ನಡೆಯಿತು. ಜಿಲ್ಲೆಯ ಸಾಹಿತಿಗಳಾದ ಗಿರಿರಾಜ್ ಹೊಸಮನಿ, ಮಹಾಂತೇಶ್ ನವಲ್ಕಲ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ ಹಾಗೂ ಶ್ರೀಮತಿ ಲಕ್ಷ್ಮೀದೇವಿ ಶಾಸ್ತ್ರಿ ಅವರ ಹೆಸರುಗಳೂ ಚರ್ಚೆಗೆ ಬಂದವು.

ಅಂತಿಮವಾಗಿ ರಾಮಣ್ಣ ಹವಳೆ ಅವರ ಹೆಸರನ್ನು ಮಸ್ಕಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ವಿದ್ಯಾವತಿ ವನಕಿ ಸೂಚಿಸಿದರು. ರಾಯಚೂರು ತಾಲೂಕು ಅಧ್ಯಕ್ಷ ಡಾ. ಬಿ. ವಿಜಯ ರಾಜೇಂದ್ರ ಹಾಗೂ ದೇವದುರ್ಗ ತಾಲೂಕು ಅಧ್ಯಕ್ಷ ಎಚ್. ಶಿವರಾಜ್ ಅವರು ಅನುಮೋದಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಒಪ್ಪಿಗೆ ಸೂಚಿಸಿದ ಹಿನ್ನೆಲೆಯಲ್ಲಿ ರಾಮಣ್ಣ ಹವಳೆ ಅವರನ್ನು ಸರ್ವಾನುಮತದಿಂದ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಘೋಷಿಸಿದರು.

ಸಭೆಯಲ್ಲಿ ಜಿಲ್ಲಾ ಗೌರವ ಕಾರ್ಯದರ್ಶಿಗಳಾದ ಮಂಜುನಾಥ್ ಕಾಮಿನ್, ತಾಯಪ್ಪ ಬಿ. ಹೊಸೂರ, ಗೌರವ ಕೋಶಾಧ್ಯಕ್ಷ ನಾಗಪ್ಪ ಜಿ. ಹೊರಪ್ಯಾಟಿ, ಜಿಲ್ಲಾ ಸಹ ಕಾರ್ಯದರ್ಶಿ ಎಂಕಣ್ಣ ಯಾದವ್, ಸಂಘಟನಾ ಕಾರ್ಯದರ್ಶಿ ಮೈನುದ್ದಿನ್ ಕಾಟ್ಮಳ್ಳಿ, ಲಿಂಗಸುಗೂರು ತಾಲೂಕು ಅಧ್ಯಕ್ಷ ಡಾ. ಮಹದೇವಪ್ಪ ನಾಗರಾಳ, ಮೌನೇಶ್ ಹಣಗಿ, ಮಾನ್ವಿ ತಾಲೂಕು ಘಟಕದ ಪರವಾಗಿ ಕಾರ್ಯದರ್ಶಿ ಲಕ್ಷ್ಮಣ್ ಜಾನೇಕಲ್, ಜಿಲ್ಲಾ ಕಸಾಪ ವಿಶೇಷ ಆಹ್ವಾನಿತರಾದ ವಿ.ಎನ್. ಅಕ್ಕಿ, ಮಹಾಂತೇಶ್ ಮಸ್ಕಿ, ಜಿಲ್ಲಾ ಪ್ರತಿನಿಧಿಗಳಾದ ಪಿ. ಜಗದೀಶ್, ಯಶೋಧ ವೈ.ಕೆ. ಸೇರಿದಂತೆ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

## ಆಯುಷ್ ವೈದ್ಯರ ಬೇಡಿಕೆ ಈಡೇರಿಕೆಗೆ ಆಗ್ರಹ: ಸೆ.22ರಿಂದ ಅನಿರ್ದಿಷ್ಟಾವಧಿ ಮುಷ್ಕರ

ತರಬೇಕು ಎಂದು ಒತ್ತಾಯಿಸಿದರು.

ಆಯುಷ್ ವೈದ್ಯರ ವಿರುದ್ಧ ಸಲ್ಲಿಕೆಯಾಗುವ ದೂರುಗಳನ್ನು ಕಾನೂನುಬದ್ಧ ಪ್ರಕ್ರಿಯೆಯ ಮೂಲಕವೇ ಪರಿಶೀಲಿಸಬೇಕು. ಅರ್ಹ ರೋಗಿ ಅಥವಾ ಅವರ ಅಧಿಕೃತ ಸಂಬಂಧಿಕರಿಂದ ಸಲ್ಲಿಕೆಯಾಗುವ ದೂರುಗಳಿಗೆ ಸೂಕ್ತ ವಿಚಾರಣಾ ವ್ಯವಸ್ಥೆ ಇರಬೇಕು ಎಂಬುದು ಫೆಡರೇಷನ್ ಬೇಡಿಕೆಯಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆಯುಷ್ ವೈದ್ಯರ ಅನುಭವ ಮತ್ತು ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸಾರ್ವಜನಿಕರಿಗೆ ಸುರಕ್ಷಿತ, ಕೈಗೆಟುಕುವ ಹಾಗೂ ಸಮಗ್ರ ಆರೋಗ್ಯ ಸೇವೆ ಒದಗಿಸಲು ಸರ್ಕಾರ ಸೂಕ್ತ ವ್ಯವಸ್ಥೆ ರೂಪಿಸಬೇಕು ಎಂದು ಡಾ. ಆನಂದ ಕಿರಿಶಾಳ ಆಗ್ರಹಿಸಿದರು.

ಈ ಬೇಡಿಕೆಗಳಿಗೆ ಸರ್ಕಾರದಿಂದ ಸ್ಪಂದನೆ ದೊರೆಯುವವರೆಗೆ ಹೋರಾಟ ಮುಂದುವರಿಸುವುದಾಗಿ ಅವರು ತಿಳಿಸಿದರು.

## ರಾಜ್ಯದಲ್ಲಿ 20 ಲಕ್ಷ ಸದಸ್ಯತ್ವ ಗುರಿ: ಶಿವಸೇನಾ ಕರ್ನಾಟಕ ಸಂಘಟನೆ ಬಲವರ್ಧನೆಗೆ ಒತ್ತು

ನಡೆಸಲಾಗುವುದು ಎಂದು ಹೇಳಿದರು. ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವುದು ಹಾಗೂ ನೇಮಕಾತಿ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ ತರಬೇಕೆಂಬುದು ಪಕ್ಷದ ಪ್ರಮುಖ ಬೇಡಿಕೆಗಳಾಗಿವೆ ಎಂದರು.

ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ರೈತರು ಸಂಕಷ್ಟದಲ್ಲಿದ್ದು, ಬರಪೀಡಿತ ಪ್ರದೇಶಗಳಲ್ಲಿ ಪರಿಹಾರ ಮತ್ತು ನೆರವು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು. ಬರ ಘೋಷಣೆಗೆ ಮಾತ್ರ ಸೀಮಿತವಾಗದೆ ರೈತರಿಗೆ ನೇರ ನೆರವು ತಲುಪುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆ, ಗಣೇಶೋತ್ಸವ ಸಂದರ್ಭದ ಪೊಲೀಸ್ ಕ್ರಮಗಳು ಹಾಗೂ ಆಡಳಿತ ವ್ಯವಸ್ಥೆಯ ಕುರಿತು ಅವರು ಹಲವು ಆಕ್ಷೇಪಗಳನ್ನು ವ್ಯಕ್ತಪಡಿಸಿದರು. ಇವು ಪಕ್ಷದ ರಾಜಕೀಯ ಆರೋಪಗಳಾಗಿದ್ದು, ಸರ್ಕಾರದ ಪ್ರತಿಕ್ರಿಯೆ ಪ್ರತ್ಯೇಕವಾಗಿದೆ.

ಧಾರವಾಡದಲ್ಲಿ ಶಿವಸೇನಾ ನೇತೃತ್ವದಲ್ಲಿ ಉದ್ಯೋಗ ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು ಹೋರಾಟ ನಡೆಸಲಾಗಿದ್ದು, ಮುಂದೆಯೂ ಯುವಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಘಟನೆ ಚಟುವಟಿಕೆ ನಡೆಸಲಿದೆ ಎಂದು ತಿಳಿಸಿದರು.

ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಶಿವಸೇನಾ ಕರ್ನಾಟಕ ಪಕ್ಷವು ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಸಿದ್ಧತೆ ನಡೆಸುತ್ತಿದೆ. ಪಕ್ಷದ ಇತ್ತೀಚಿನ ರಾಜ್ಯಮಟ್ಟದ ಸದಸ್ಯತ್ವ ಅಭಿಯಾನದಲ್ಲಿಯೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಪದಾಧಿಕಾರಿಗಳು ಘೋಷಿಸಿದ್ದಾರೆ.

ಪಕ್ಷವು ರಾಜ್ಯದ 24 ಜಿಲ್ಲೆಗಳಲ್ಲಿ ಸಂಘಟನಾ ನೆಲೆ ಹೊಂದಿದ್ದು, ಉಳಿದ ಪ್ರದೇಶಗಳಲ್ಲಿಯೂ ಘಟಕಗಳನ್ನು ವಿಸ್ತರಿಸುವ ಕೆಲಸ ಕೈಗೊಳ್ಳಲಾಗುವುದು ಎಂದು ಗಂಗಾಧರ್ ಪ್ರಧಾನ ಕುಲಕರ್ಣಿ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ರಾಜ ಚಂದ್ರ ರಾಮನಗೌಡ, ಪವನ್ ಕುಮ್ಹಾರ್, ಹರೀಶ್ ಮಡಿವಾಳ್, ಪ್ರಭು ಮಡಿವಾಳ್, ವಿಜಯ್ ಪಾಟೀಲ್ ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಗಣೇಶ ವಿಸರ್ಜನೆ ದುರಂತ: ಮೃತ ಬಾಲಕರ ಕುಟುಂಬಗಳಿಗೆ ಜಿಲ್ಲಾಧಿಕಾರಿ, ಎಸ್ಪಿ ಸಾಂತ್ವನ

ಅಗತ್ಯ ತನಿಖೆ ಹಾಗೂ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಗಣೇಶೋತ್ಸವದ ಮುಂದಿನ ವಿಸರ್ಜನಾ ಕಾರ್ಯಕ್ರಮಗಳ ಸಂದರ್ಭದಲ್ಲಿ ಇಂತಹ ದುರ್ಘಟನೆಗಳು ಮರುಕಳಿಸದಂತೆ ಸುರಕ್ಷತಾ ಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯವಿದ್ದು, ಸಾರ್ವಜನಿಕರು ಹಾಗೂ ಉತ್ಸವ ಸಮಿತಿಗಳು ಪೊಲೀಸ್ ಮತ್ತು ಜಿಲ್ಲಾಡಳಿತದ ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರು, ಇತರೆ ಇಲಾಖೆಗಳ ಅಧಿಕಾರಿಗಳು ಹಾಗೂ ರವೀಂದ್ರ ಜಲ್ದಾರ್ ಸೇರಿದಂತೆ ಹಲವರು ಮೃತ ಬಾಲಕರ ಕುಟುಂಬಸ್ಥರನ್ನು ಭೇಟಿಯಾಗಿ ಸಾಂತ್ವನ ತಿಳಿಸಿದರು.

# ಮೊದಲನೇ ಪುಟದಿಂದ

## ಎಸ್‌ಸಿಎಸ್‌ಟಿ ರೈತರಿಗೆ 27 ಬೋರ್‌ವೆಲ್ ಪಂಪ್‌ಸೆಟ್ ವಿತರಣೆ; ನೀರಾವರಿ ಬಲವರ್ಧನೆಗೆ ಒತ್ತು: ದದ್ದಲ್

ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದ್ದು, ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಹಾಗೂ ನೀರಿನ ಕೊರತೆ ಕುರಿತೂ ರೈತರಿಂದ ಅಹವಾಲುಗಳು ಕೇಳಿಬರುತ್ತಿವೆ.

ಬರ ಪರಿಸ್ಥಿತಿಯಲ್ಲಿ ರೈತರಿಗೆ ಪರಿಹಾರ, ನೀರಾವರಿ ಹಾಗೂ ಇತರೆ ಕೃಷಿ ನೆರವು ಸಕಾಲದಲ್ಲಿ ತಲುಪಿಸುವುದು ಅಗತ್ಯ. ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಅರ್ಹ ರೈತರಿಗೆ ತಲುಪಿಸಲು ಸಂಬಂಧಿಸಿದ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲಾಗುವುದು ಎಂದು ದದ್ದಲ್ ಹೇಳಿದರು.

“ರೈತರ ಹೊಲ ಹಸಿರಾಗಬೇಕು, ಅವರ ಬದುಕು ಸಮೃದ್ಧವಾಗಬೇಕು. ಕೃಷಿಗೆ ಅಗತ್ಯವಾದ ಮೂಲಸೌಕರ್ಯ ದೊರೆತಾಗ ಮಾತ್ರ ರೈತರ ಆರ್ಥಿಕ ಸ್ಥಿತಿ ಸುಧಾರಿಸಲು ಸಾಧ್ಯ. ಸಂಕಷ್ಟದ ಸಂದರ್ಭದಲ್ಲಿ ರೈತರೊಂದಿಗೆ ನಿಲ್ಲುವುದು ನಮ್ಮ ಜವಾಬ್ದಾರಿ’’ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಸಿಎಸ್‌ಟಿ ಸಮುದಾಯದ ಫಲಾನುಭವಿಗಳು, ರೈತರು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದು, ಪಂಪ್‌ಸೆಟ್‌ಗಳನ್ನು ಸ್ವೀಕರಿಸಿದರು.

## ಯಾವುದೇ ದುರ್ಘಟನೆಗಳು ನಡೆಯದಂತೆ ಜಿಲ್ಲಾಡಳಿತಕ್ಕೆ ಸಹಕರಿಸಿ: ಜಿಲ್ಲಾಧಿಕಾರಿ ಪೂವಿತಾ ಎಸ್.

ಭಜನೆಗಳು ಮತ್ತು ಲೈಟ್ ಮ್ಯೂಸಿಕ್ ಮೂಲಕ ಉತ್ಸವವನ್ನು ಶಾಂತಿಯುತವಾಗಿ ನಡೆಸಬೇಕು ಎಂದರು.

ಗಣೇಶ ವಿಸರ್ಜನೆಗಾಗಿ ರಾಯಚೂರಿನ ಕಾಸಭಾವಿಗೆಹೋದಾಗ ಜನರನ್ನು ಒಳಗೆ ಬಿಡದಂತೆ ಕಟ್ಟುನಿಟ್ಟಾಗಿ ನಿರ್ಬಂಧಿಸಬೇಕು. ಹಿಂದೆ ಕಾಲು ಜಾರಿ ಒಬ್ಬರು ಒಳಗೆ ಬಿದ್ದ ಘಟನೆ ನಡೆದಿದೆ. ಕಾರ್ಪೊರೇಷನ್ ವತಿಯಿಂದ ಗಣಪತಿಗಳನ್ನು ಕ್ರೈನ್ ಮೂಲಕ ಅಥವಾ ನಿಗದಿತ ರೀತಿಯಲ್ಲಿ ಮಾತ್ರ ವಿಸರ್ಜನೆ ಮಾಡಬೇಕು. ಅಲ್ಲದೆ ರಾತ್ರಿ 11 ಗಂಟೆಯ ನಂತರ ಬ್ಯಾರಿಕೇಡ್ ದಾಟಿ ಯಾರೂ ಮುಂದೆ ಹೋಗದಂತೆ ಎಚ್ಚರವಹಿಸಬೇಕು ಎಂದರು.

ಈ ವೇಳೆ ರಾಯಚೂರು ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹೊಪಾತ್ರ ಅವರು ಮಾತನಾಡಿ, ಕುಡಿದುಕೊಂಡು ಯಾವುದೇ ಕಾರಣಕ್ಕೂ ಟ್ರ್ಯಾಕ್ಟರ್, ಆಟೋ, ಕಾರು ಅಥವಾ ವಿಸರ್ಜನಾ ಸ್ಥಳಗಳಿಗೆ ಬರಬಾರದು. ಕಳೆದ ಒಂದು ವಾರದಿಂದ ನಿರಂತರವಾಗಿ ಕಾರ್ಪೊರೇಷನ್ ವತಿಯಿಂದ ಮೈಕ್ ಸಿಸ್ಟಮ್ ಯೂಸ್ ಮಾಡಿ ಕಾಲ್ಸೇಟರ್ ಹತ್ತಿರ ಅನೌನ್ಸ್ಮೆಂಟ್ಸ್ ಮಾಡ್ತಾ ಇದ್ದೀವಿ. ಕೆಲವರು ಕಾರ್ಪೊರೇಷನ್ ಸಿಬ್ಬಂದಿಗಳಿಗೆ ಕೆಟ್ಟ ವರ್ತನೆ ಮಾಡೋದು, ಅವರಿಗೆ ಬಾಯೋದು, ಇವರು ಯಾರು ನಮಗೆ ನಿರ್ದೇಶಲಿಕ್ಕೆ ಅಂತಾನೂ ಹೇಳುವಂತಹ ವಿಚಾರ ಕೂಡ ನಮಗೆ ಕಂಡುಬಂದಿದೆ. ದಯವಿಟ್ಟು ಸರ್ಕಾರಿ ಸಿಬ್ಬಂದಿಗಳೊಂದಿಗೆ ಗಲಾಟೆ ಮಾಡಬಾರದು. ಶಬ್ದ ಮಾಲಿನ್ಯ ನಿಯಂತ್ರಣ ನಿಯಮಗಳು 2000 ಮತ್ತೆ 2005ರಂತೆ ಸಂಬಂಧಿಸಿದ ಅಧಿಕಾರಿಗಳಿಂದ ಲೈಸೆನ್ಸ್‌ಪಡೆಯಬೇಕು ಎಂದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ ಅವರು ಮಾತನಾಡಿ, ಜನರು ಹೆಲ್ಮೆಟ್ ಧರಿಸಬೇಕು. ತಮ್ಮ ಪ್ರಾಣಕ್ಕೆ ಬೆಲೆ ಕೊಡದೆ ಹೋದರೆ ಬೇರೆಯವರ ಪ್ರಾಣಕ್ಕೆ ಹೇಗೆ ಬೆಲೆ ಕೊಡಲು ಸಾಧ್ಯ. ಹೆಲ್ಮೆಟ್ ಹಾಕದೆ, ಗಾಡಿಯನ್ನು ವೇಗವಾಗಿ ಚಲಾಯಿಸಬಾರದು. ಇತ್ತೀಚೆಗೆ ಸಿಂಧೂರಿನಲ್ಲಿ ಅತ್ಯಂತ ಉತ್ತಮವಾಗಿ ಗಣೇಶ ವಿಸರ್ಜನೆ ಮಾಡಲಾಗಿದೆ. ಅದೇ ರೀತಿಯಲ್ಲಿ ಜಿಲ್ಲೆಯ ಎಲ್ಲ ಕಡೆ ವಿಸರ್ಜನೆ ಮಾಡಬೇಕು. ಗಜಾನನ ಮಂಡಳಿಯವರು ಸರಿಯಾದ ಸಮಯಕ್ಕೆ ಧ್ವನಿವರ್ಧಕಗಳನ್ನು ಬಂದ್ ಮಾಡಬೇಕು. ಅಲ್ಲದೆ ಎಲ್ಲರೂ ಸಮಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದರು.

ಗಣೇಶ ವಿಸರ್ಜನೆ ವೇಳೆಯಲ್ಲಿ ಡಿಜೆ ಬಳಕೆಯಿಂದಾಗಿ ಮಕ್ಕಳು, ವೃದ್ಧರು, ಆಸ್ಪತ್ರೆಗಳಿಗೆ ಯಾವುದೇ ರೀತಿಯ ತೊಂದರೆ ಅಥವಾ ಪರಿಣಾಮ ಉಂಟಾಗದಂತೆ ಪೊಲೀಸ್ ಇಲಾಖೆಯೊಂದಿಗೆ ಸಂಪೂರ್ಣ ಸಹಕರಿಸುವಂತೆ ವಿವಿಧ ಗಜಾನನ ಮಂಡಳಿಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ನಿರ್ದೇಶನ ನೀಡಿದರು.

08 ಪ್ರಕರಣ ದಾಖಲು: ರಾಯಚೂರು ಜಿಲ್ಲೆಯಲ್ಲಿ ಸಾರ್ವಜನಿಕ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಮೆರವಣಿಗೆ ವೇಳೆ ನಿಗದಿತ ಮಿತಿಗಿಂತ ಹೆಚ್ಚಿನ ಶಬ್ದದ ಡಿಜಿ ಬಳಕೆ ಮಾಡಿ ಶಬ್ದ ಮಾಲಿನ್ಯ ನಿಯಮಾವಳಿ ಉಲ್ಲಂಘಿಸಿದ ಡಿಜಿ ಮಾಲಕರು ಹಾಗೂ ಆಪರೇಟರ್‌ಗಳ ವಿರುದ್ಧ 8 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ ಅವರು ತಿಳಿಸಿದರು.

ಇತ್ತೀಚೆಗೆ ರಾಯಚೂರು ನಗರದ ಜಹೀರಾಬಾದಿನಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಟ್ರ್ಯಾಕ್ಟರ್ ಹರಿದು ಇಬ್ಬರು ಬಾಲಕರ ದುರ್ಮರಣ ಹೊಂದಿದ ಹಿನ್ನೆಲೆಯಲ್ಲಿ ಸಭೆಯಲ್ಲಿ ಒಂದು ನಿಮಿಷ ಕಾಲ ಮೌನಚರಣೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹರೀಶ್, ರಾಯಚೂರು ಡಿವೈಎಸ್ಪಿ ಶಾಂತಮೂರ್ತಿ, ರಾಯಚೂರು ತಹಶಿಲ್ದಾರ್ ಸುರೇಶ ವರ್ಮಾ, ಜೋನಲ್ ಆಯುಕ್ತ ಮಲ್ಲಿಕಾರ್ಜುನ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಗಜಾನನ ಮಂಡಳಿಯ ಪದಾಧಿಕಾರಿಗಳು, ವಿವಿಧ ಸಂಘಟನೆಯ ಮುಖಂಡರು ಸಭೆಯಲ್ಲಿ ಇದ್ದರು.

## ಗಣೇಶ ವಿಸರ್ಜನೆ ಮೆರವಣಿಗೆ ಹಗಲಲ್ಲೇ ನಡೆಯಲಿ: ಎ. ಪಾಪಾರೆಡ್ಡಿ ಮನವಿ

ಅಪಘಾತದಲ್ಲಿ ಇಬ್ಬರು ಬಾಲಕರು ಮೃತಪಟ್ಟಿದ್ದು ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿರುವುದನ್ನು ಪೊಲೀಸ್ ಮಾಹಿತಿಯನ್ನಾಧರಿಸಿದ ವರದಿಗಳು ದೃಢಪಡಿಸಿವೆ.

ಗಣೇಶೋತ್ಸವದ ಪೂರ್ವಭಾವಿ ಸಭೆಯಲ್ಲಿಯೇ ಮೆರವಣಿಗೆಗಳನ್ನು ಸುರಕ್ಷಿತವಾಗಿ ನಡೆಸುವಂತೆ ಹಾಗೂ ಅತಿಯಾದ ಶಬ್ದದ ಡಿಜೆ ಬಳಕೆ ತಪ್ಪಿಸುವಂತೆ ಸಮಿತಿಗಳಿಗೆ ಮನವಿ ಮಾಡಲಾಗಿತ್ತು. ಮಧ್ಯರಾತ್ರಿಯಲ್ಲಿ ಮೆರವಣಿಗೆ ಆರಂಭಿಸಿ ಇಡೀ ರಾತ್ರಿ ನಡೆಸುವುದರಿಂದ ಮಹಿಳೆಯರು, ಮಕ್ಕಳು ಹಾಗೂ ಕುಟುಂಬ ಸಮೇತ ಬರುವ ಸಾರ್ವಜನಿಕರು ಸಂಭ್ರಮದಲ್ಲಿ ಭಾಗವಹಿಸುವ ಅವಕಾಶ ಕಡಿಮೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ನಗರದ ಎಲ್ಲ ವರ್ಗದ ಜನರು ವಿಸರ್ಜನಾ ಮೆರವಣಿಗೆಯನ್ನು ವೀಕ್ಷಿಸಿ ಪಾಲ್ಗೊಳ್ಳುವಂತಾಗಲು ಸಮಯ ಮತ್ತು ವ್ಯವಸ್ಥೆಯಲ್ಲಿ ಬದಲಾವಣೆ ಅಗತ್ಯ. ಮೆರವಣಿಗೆಯಲ್ಲಿ ಸ್ಥಳೀಯ ಕಲಾವಿದರಿಗೆ ಅವಕಾಶ ಕಲ್ಪಿಸಿ, ಭಜನೆ, ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಗಣೇಶ ಮೂರ್ತಿ ಪ್ರತಿಷ್ಠಾಪನೆಯೊಂದಿಗೆ ಧಾರ್ಮಿಕ ಪೂಜೆ, ಭಜನೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ನಡೆಯಬೇಕು. ಕೆಲವು ಕಡೆ ಮಹಿಳೆಯರು ಮತ್ತು ಭಕ್ತರ ಸಹಭಾಗಿತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಇಂತಹ ಮಾದರಿಯನ್ನು ಇತರ ಗಜಾನನ ಸಮಿತಿಗಳೂ ಅಳವಡಿಸಿಕೊಳ್ಳಬೇಕು ಎಂದರು.

ಗಜಾನನ ಸಮಿತಿಗಳಿಗೆ ಸಹಾಯ ನೀಡುವ ರಾಜಕೀಯ ಹಾಗೂ ಸಾಮಾಜಿಕ ಮುಖಂಡರೂ ಸುರಕ್ಷಿತ ಮತ್ತು ಹಗಲಿನ ವಿಸರ್ಜನಾ ಮೆರವಣಿಗೆಗೆ ಪ್ರೋತ್ಸಾಹ ನೀಡಬೇಕು. ಹೊಸ ಸುರಕ್ಷತಾ ಪದ್ಧತಿಗಳನ್ನು ರೂಢಿಸಿಕೊಳ್ಳದಿದ್ದರೆ ಭವಿಷ್ಯದಲ್ಲಿ ಅನಾಹುತಗಳು ಮರುಕಳಿಸುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಗಣೇಶೋತ್ಸವದಲ್ಲಿ ಅತಿಯಾದ ಡಿಜೆ, ಅಪಾಯಕಾರಿಯಾದ ವಾಹನ ಸಂಚಾರಕ್ಕಿಂತ ಧಾರ್ಮಿಕ ಆಚರಣೆ, ಸಂಸ್ಕೃತಿ ಮತ್ತು ಸಾರ್ವಜನಿಕ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು. ಎಲ್ಲರೂ ಒಗ್ಗಟ್ಟಿನಿಂದ ಸಮಿತಿಗಳ ಮನವೊಲಿಸಿ, ಅವಘಡಮುಕ್ತ ಗಣೇಶೋತ್ಸವಕ್ಕೆ ಕೈಜೋಡಿಸಬೇಕು ಎಂದು ಪಾಪಾರೆಡ್ಡಿ ಕೋರಿದರು.

ಈ ಸಂದರ್ಭದಲ್ಲಿ ಬೆಟ್ಟಪ್ಪ, ಆರ್‌ಡಿಎ ಮಾಜಿ ಅಧ್ಯಕ್ಷ ರಾಜಕುಮಾರ, ಅಂಜಿನಯ್ಯ ಕಡಗೋಲ, ಬಿ. ಗೋವಿಂದ, ಗುಡ್ಸಿ ನರಸರೆಡ್ಡಿ, ಶ್ರೀನಿವಾಸ ರೆಡ್ಡಿ, ಬಾಬುರಾವ್, ನರಸಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಶ್ರೀಮಠದಲ್ಲಿ ಪ್ರೋಷ್ಠಪದಿ ಭಾಗವತ ಪ್ರವಚನಕ್ಕೆ ಚಾಲನೆ

ಕಾರ್ಯಕ್ರಮದ ಆರಂಭದಲ್ಲಿ ಶ್ರೀಮಠದ ಸಂಪ್ರದಾಯದಂತೆ ಪೂಜಾ ವಿಧಿವಿಧಾನಗಳು ನೆರವೇರಿದವು. ಬಳಿಕ ಶ್ರೀ ಸುಬುಧೇಂದ್ರ ತೀರ್ಥರು ವಿದ್ವಾಂಸರ ಪ್ರವಚನಕ್ಕೆ ಶುಭ ಹಾರೈಸಿ, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಭಾಗವತದ ಅಮೃತವಾಣಿಯನ್ನು ಆಲಿಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು, ಶ್ರೀಮಠದ ಸಿಬ್ಬಂದಿ ಹಾಗೂ ಸೇವಾರ್ಥಿಗಳು ಉಪಸ್ಥಿತರಿದ್ದು, ಪ್ರವಚನ ಕಾರ್ಯಕ್ರಮದಲ್ಲಿ ಭಕ್ತಿಭಾವದಿಂದ ಪಾಲ್ಗೊಂಡರು. ಶ್ರೀಮಠದ ಆವರಣದಲ್ಲಿ ಧಾರ್ಮಿಕ ವಾತಾವರಣ ಕಂಗೊಳಿಸಿತು.

## ಕರ್ಕಶ ಡಿಜೆ ಬಳಸಿದರೆ ವಾಹನ ಸೀಜ್: ಎಸ್‌ಪಿ ಅರುಣಾಂಶು ಗಿರಿ ಎಚ್ಚರಿಕೆ

ಡಿಜೆ ವ್ಯವಸ್ಥೆಯಲ್ಲಿ ಒಂದು ಬೇಸ್ ಹಾಗೂ ಒಂದು ಟಾಪ್ ಮಾತ್ರ ಬಳಸಬೇಕು. ನಿಯಮ ಮೀರಿ ಹೆಚ್ಚಿನ ಸಾಮರ್ಥ್ಯದ ಅಥವಾ ಕರ್ಕಶ ಧ್ವನಿಯ ಉಪಕರಣಗಳನ್ನು ಬಳಸಿರುವುದು ಕಂಡುಬಂದರೆ ಯಾವುದೇ ಮುಲಾಜಿಲ್ಲದೆ ವಾಹನವನ್ನು ಸೀಜ್ ಮಾಡಲಾಗುವುದು ಎಂದು ಎಚ್ಚರಿಸಿದರು.

ಗಣೇಶೋತ್ಸವ ಹಾಗೂ ವಿಸರ್ಜನಾ ಮೆರವಣಿಗೆಗಳು ಶಾಂತಿಯುತವಾಗಿ ಮತ್ತು ಸೌಹಾರ್ದತೆಯಿಂದ ನಡೆಯಬೇಕು. ಆಯೋಜಕರು ಪೊಲೀಸ್ ಇಲಾಖೆಯ ಸೂಚನೆಗಳಿಗೆ ಸಹಕರಿಸುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಇದೇ ವೇಳೆ ಹಿರಿಯ ಮುಖಂಡರು ಹಾಗೂ ಮಾಧ್ಯಮ ಪ್ರತಿನಿಧಿಗಳೊಂದಿಗೆ ವಿಸರ್ಜನೆ ಸಂಬಂಧಿತ ವ್ಯವಸ್ಥೆಗಳ ಕುರಿತು ಚರ್ಚಿಸಿದರು.

ಈ ಸಂದರ್ಭದಲ್ಲಿ ಎಎಸ್‌ಪಿ ಜಿ. ಹರೀಶ್, ಉಪವಿಭಾಗಾಧಿಕಾರಿ ಶಾಂತವೀರ ಇ., ಸಿಪಿಐ ಉಮೇಶ್ ಕಾಂಬ್ಳೆ, ಪಿಎಸ್‌ಐ ದಾದಾವಲಿ, ಮುಖಂಡರಾದ ರವೀಂದ್ರ ಜಲ್ದಾರ, ಶ್ರೀನಿವಾಸ ಪತಂಗೆ, ನರಸಪ್ಪ ಯಕ್ಲಾಸಪೂರ, ಭೀಮರೆಡ್ಡಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಶತಮಾನೋತ್ಸವದ ನೆನಪಿಗೆ ₹1 ಕೋಟಿ ವೆಚ್ಚದ ದಾಸೋಹ ಭವನ ನಿರ್ಮಾಣಕ್ಕೆ ಸಂಕಲ್ಪ

## ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದಲ್ಲಿ ಪೂರ್ವಭಾವಿ ಸಭೆ; ಮೊದಲ ದಿನವೇ 35 ದಾನಿಗಳ ಹೆಸರು ನೋಂದಣಿ

ಮಾನ್ವಿ: ಸುಕ್ಷೇತ್ರ ಚೀಕಲಪರ್ವಿಯ ಶ್ರೀ ರುದ್ರಮುನೀಶ್ವರ ಮಠದ ಶತಮಾನೋತ್ಸವವನ್ನು ಅರ್ಥಪೂರ್ಣ ಹಾಗೂ ಸ್ಮರಣೀಯವಾಗಿ ಆಚರಿಸುವ ಉದ್ದೇಶದಿಂದ ಅಂದಾಜು ₹1 ಕೋಟಿ ವೆಚ್ಚದಲ್ಲಿ ನೂತನ ದಾಸೋಹ ಭವನ ನಿರ್ಮಿಸಲು ಸಂಕಲ್ಪ ಮಾಡಲಾಗಿದ್ದು, ಈ ಕುರಿತು ಭಾನುವಾರ ಸೆ.20ರಂದು ಬೆಳಗ್ಗೆ 11 ಗಂಟೆಗೆ ಮಠದ ಆವರಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಶತಮಾನಗಳಿಂದ ಅನ್ನದಾಸೋಹ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವ ಶ್ರೀಮಠದ ಸೇವೆಯನ್ನು ಇನ್ನಷ್ಟು ವಿಸ್ತರಿಸುವುದು, ಮಠಕ್ಕೆ ಆಗಮಿಸುವ ಭಕ್ತರಿಗೆ ದಾಸೋಹದ ಜೊತೆಗೆ ವಸತಿ ಸೌಲಭ್ಯ ಕಲ್ಪಿಸುವುದು ಹಾಗೂ ಶತಮಾನೋತ್ಸವದ ನೆನಪಿಗಾಗಿ ಶಾಶ್ವತ ಕೊಡುಗೆಯನ್ನು ನಿರ್ಮಿಸುವ ಉದ್ದೇಶದಿಂದ ದಾಸೋಹ ಭವನ ನಿರ್ಮಾಣದ ಕುರಿತು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು. ಮಠದ ಭಕ್ತರು, ವಿವಿಧ ಗ್ರಾಮಗಳ ಮುಖಂಡರು, ರೈತರು, ಉದ್ಯಮಿಗಳು, ಗಣ್ಯರು ಹಾಗೂ ಸಾರ್ವಜನಿಕರು ಸಭೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸಭೆಯ ಆರಂಭದಲ್ಲಿ ಶ್ರೀ ನಿರಂಜನ ದೇವರು ಮಾತನಾಡಿ, ದಾಸೋಹ ಪರಂಪರೆಯ ಮಹತ್ವ ಹಾಗೂ ಚೀಕಲಪರ್ವಿ ಮಠದ ಐತಿಹಾಸಿಕ ಸೇವೆಯನ್ನು ಪರಿಚಯಿಸಿದರು. ಅನೇಕ ಮಠಗಳು ಶಾಲೆ, ಕಾಲೇಜು, ಶಿಕ್ಷಣ ಸಂಸ್ಥೆ, ವೈದ್ಯಕೀಯ ಕಾಲೇಜು ಸೇರಿದಂತೆ ವಿವಿಧ ಸಂಸ್ಥೆಗಳ ಮೂಲಕ ಪ್ರಸಿದ್ಧಿ ಪಡೆದಿವೆ. ಆದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಆಲವಿ ಮತ್ತು ಚೀಕಲಪರ್ವಿ ಮಠಗಳು 12ನೇ ಶತಮಾನದಿಂದಲೂ ನಿತ್ಯ ಅನ್ನದಾಸೋಹದ ಮೂಲಕ ಭಕ್ತರ ಸೇವೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ ಎಂದು ಹೇಳಿದರು.

ಅನ್ನದಾಸೋಹ ಎಂಬುದು ಕೇವಲ ಊಟ ನೀಡುವ ವ್ಯವಸ್ಥೆಯಲ್ಲ. ಹಸಿದವರಿಗೆ ಅನ್ನ ನೀಡುವುದರ ಜೊತೆಗೆ ಮಠಕ್ಕೆ ಬರುವ ಪ್ರತಿಯೊಬ್ಬ ಭಕ್ತನನ್ನೂ ಆತ್ಮೀಯವಾಗಿ ಕಾಣುವ ಮಾನವೀಯ ಪರಂಪರೆಯಾಗಿದೆ. ಇಂತಹ ದಾಸೋಹ ಪರಂಪರೆಯನ್ನು ಮುಂದಿನ ಪೀಳಿಗೆಗೂ ತಲುಪಿಸುವ ನಿಟ್ಟಿನಲ್ಲಿ ನೂತನ ದಾಸೋಹ ಭವನ ನಿರ್ಮಾಣ ಮಹತ್ವದ ಹೆಜ್ಜೆಯಾಗಲಿದೆ ಎಂದು ತಿಳಿಸಿದರು.

ಇದಕ್ಕೂ ಮೊದಲು ಬಸನಗೌಡ ಶಿವಪೂಜಿ ಅವರು ಪ್ರಸ್ತಾವಿತ ದಾಸೋಹ ಭವನದ ಉದ್ದೇಶ, ನಿರ್ಮಾಣದ ರೂಪುರೇಷೆ, ಭಕ್ತರಿಗೆ ದೊರೆಯಲಿರುವ ಅನುಕೂಲತೆಗಳು ಹಾಗೂ ಶತಮಾನೋತ್ಸವದ ಹಿನ್ನೆಲೆಯಲ್ಲಿ ಕೈಗೊಳ್ಳಲಾಗುತ್ತಿರುವ ಯೋಜನೆಯ ಕುರಿತು ಸಭಿಕರಿಗೆ ವಿಸ್ತೃತ ಮಾಹಿತಿ ನೀಡಿದರು.

### ಬರ ಪರಿಸ್ಥಿತಿಯನ್ನೂ ಪರಿಗಣಿಸಬೇಕು: ಮಾಜಿ ಶಾಸಕ ಬಸನಗೌಡ ಬ್ಯಾಗವಾಟ್

ಮಾಜಿ ಶಾಸಕ ಬಸನಗೌಡ ಬ್ಯಾಗವಾಟ್ ಮಾತನಾಡಿ, ಪ್ರಸ್ತುತ ಮಳೆ ಕೊರತೆ ಮತ್ತು ಬರಗಾಲದಿಂದಾಗಿ ಜನರು, ವಿಶೇಷವಾಗಿ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ದಾಸೋಹ ಭವನ ನಿರ್ಮಾಣ ಉತ್ತಮ ಉದ್ದೇಶವಾದರೂ ಇಂದಿನ ಪರಿಸ್ಥಿತಿಯನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಸುಮಾರು ನಾಲ್ಕು ತಿಂಗಳ ಕಾಲ ಕಾದು, ನಂತರ ಪರಿಸ್ಥಿತಿಯನ್ನು ಅವಲೋಕಿಸಿ ಮತ್ತೊಮ್ಮೆ ಚರ್ಚಿಸಿ ಮುಂದುವರಿಯುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

### ಸಂಕಲ್ಪ ಮಾಡಿದ ಕಾರ್ಯ ನಿಲ್ಲಬಾರದು: ಗಂಗಾಧರ ನಾಯಕ

ಮಾಜಿ ಶಾಸಕ ಗಂಗಾಧರ ನಾಯಕ ಮಾತನಾಡಿ, ಸಮಾಜದ ಹಿತದೃಷ್ಟಿಯಿಂದ ಒಂದು ಒಳ್ಳೆಯ ಕಾರ್ಯ ಮಾಡಲು ಎಲ್ಲರೂ ಮನಸ್ಸು ಮಾಡಿದ ಮೇಲೆ ಅದನ್ನು ಯಾವುದೇ ಕಾರಣಕ್ಕೂ ಮಧ್ಯದಲ್ಲಿ ನಿಲ್ಲಿಸಬಾರದು. ದಾಸೋಹ ಭವನ ನಿರ್ಮಾಣದ ಸಂಕಲ್ಪವನ್ನು ದೃಢವಾಗಿ ಮುಂದುವರಿಸಬೇಕು ಎಂದು ಹೇಳಿದರು.

ಎಲ್ಲ ಭಕ್ತರೂ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕೈಜೋಡಿಸಿದರೆ ಕಟ್ಟಡ ನಿರ್ಮಾಣವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯ. ಸೇವಾ ಕಾರ್ಯಗಳಿಗೆ ಸಂಕಲ್ಪ ಹಾಗೂ ಒಗ್ಗಟ್ಟು ಮುಖ್ಯ ಎಂದು ಅಭಿಪ್ರಾಯಪಟ್ಟರು.

### ಶತಮಾನೋತ್ಸವ ಮತ್ತೆ ಬರುವುದಿಲ್ಲ: ತಿಮ್ಮಾರೆಡ್ಡಿ ಭೋಗಾವತಿ

ತಿಮ್ಮಾರೆಡ್ಡಿ ಭೋಗಾವತಿ ಮಾತನಾಡಿ, ಮಠದ ನೂರು ವರ್ಷಗಳ ಶತಮಾನೋತ್ಸವ ನಮ್ಮ ಜೀವನದಲ್ಲಿ ಮತ್ತೆ ಮತ್ತೆ ಸಿಗುವ ಸಂದರ್ಭವಲ್ಲ. ಇಂತಹ ಐತಿಹಾಸಿಕ ಸಂದರ್ಭದಲ್ಲಿ ಮಠದ ಸೇವಾ ಕಾರ್ಯಕ್ಕೆ ಕೈಜೋಡಿಸುವುದು ಪ್ರತಿಯೊಬ್ಬ ಭಕ್ತನಿಗೂ ದೊರೆಯುವ ಅಪರೂಪದ ಅವಕಾಶ ಎಂದು ಹೇಳಿದರು.

ದಾಸೋಹ ಭವನದ ನಿರ್ಮಾಣಕ್ಕೆ ಕೈಜೋಡಿಸುವ ನೂರು ದಾನಿಗಳ ಹೆಸರುಗಳು ಭವನದಲ್ಲಿ ಶಾಶ್ವತವಾಗಿ ಉಳಿಯಲಿವೆ. ಮುಂದಿನ ತಲೆಮಾರುಗಳ ಸಾವಿರಾರು ಭಕ್ತರು ಈ ಭವನದಲ್ಲಿ ಅನ್ನಪ್ರಸಾದ



ಸ್ವೀಕರಿಸುವ ಸಂದರ್ಭದಲ್ಲಿ ದಾನಿಗಳ ಸೇವೆಯೂ ನೆನಪಾಗಲಿದೆ. ಹೀಗಾಗಿ ಈ ಅವಕಾಶವನ್ನು ಕೇವಲ ದೇಣಿಗೆಯಾಗಿ ನೋಡದೆ, ಮಠದ ಶತಮಾನೋತ್ಸವಕ್ಕೆ ನೀಡುವ ಶಾಶ್ವತ ಸೇವೆಯಾಗಿ ಪರಿಗಣಿಸಬೇಕು ಎಂದು ಹೇಳಿದರು.

ಈಗಾಗಲೇ ಕೆಲ ಭಕ್ತರು ದಾಸೋಹ ಭವನದ ನಿರ್ಮಾಣಕ್ಕೆ ಸಿಮೆಂಟ್, ಉಕ್ಕು ಸೇರಿದಂತೆ ಕಟ್ಟಡ ಸಾಮಗ್ರಿಗಳನ್ನು ನೀಡುವುದಾಗಿ ತಿಳಿಸಿದ್ದಾರೆ. ಕೆಲವರು ದೇಣಿಗೆ ನೀಡಲು ಮುಂದೆ ಬಂದಿದ್ದರೂ ತಮ್ಮ ಹೆಸರು ಬಹಿರಂಗಪಡಿಸಬಾರದು ಎಂಬ ಆಶಯ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

### "ಮನಸ್ಸಿದ್ದರೆ ಮಾರ್ಗ": ಶಂಕರಯ್ಯ ತಾತ

ಶಂಕರಯ್ಯ ತಾತ ಮಾತನಾಡಿ, ಬರದ ಪರಿಸ್ಥಿತಿ ಇದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಶ್ರೀಮಠದ ನೂರು ವರ್ಷದ ಶತಮಾನೋತ್ಸವವನ್ನು ಆಚರಿಸುವ ಅವಕಾಶವೂ ಮತ್ತೆ ಸಿಗುವುದಿಲ್ಲ. ಈ ಶತಮಾನೋತ್ಸವವನ್ನು ಆಚರಿಸುವ ಪೀಳಿಗೆಯ ಭಾಗವಾಗಿರುವುದೇ ನಮ್ಮೆಲ್ಲರ ಹೆಮ್ಮೆ ಎಂದು ಹೇಳಿದರು.

"ಮನಸ್ಸಿದ್ದರೆ ಮಾರ್ಗ" ಎಂಬ ನುಡಿಯಂತೆ ಕಷ್ಟಗಳನ್ನೇ ಮುಂದಿಟ್ಟುಕೊಂಡು ಉತ್ತಮ ಕಾರ್ಯವನ್ನು ಮುಂದೂಡಬಾರದು. ಎಲ್ಲರೂ ಒಂದಾಗಿ ಶ್ರೀ ಸದಾಶಿವ ಸ್ವಾಮೀಜಿಗಳೊಂದಿಗೆ ನಿಂತು ದಾಸೋಹ ಭವನ ನಿರ್ಮಾಣ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಭಕ್ತರ ಸಂಕಲ್ಪವಿದ್ದರೆ ನಿಗದಿತ ಅವಧಿಯಲ್ಲೇ ನಿರ್ಮಾಣ: ಡಾ. ಶಂಕರಗೌಡ ಪಾಟೀಲ

ಡಾ. ಶಂಕರಗೌಡ ಪಾಟೀಲ ಮಾತನಾಡಿ, ತಾವು ಈ ಭಾಗದಲ್ಲಿ ಸುಮಾರು 17 ವರ್ಷಗಳಿಂದ ಸೇವೆ ಸಲ್ಲಿಸಿದ್ದು, ಇಲ್ಲಿನ ಜನರು ಮತ್ತು ಮಠದ ಭಕ್ತರ ಸೇವಾ ಮನೋಭಾವವನ್ನು ಹತ್ತಿರದಿಂದ ಕಂಡಿದ್ದೇನೆ ಎಂದರು.

ಎಲ್ಲ ಭಕ್ತರು ಒಗ್ಗಟ್ಟಿನಿಂದ ಸಂಕಲ್ಪ ಮಾಡಿ ಮುಂದೆ ಬಂದರೆ ಶತಮಾನೋತ್ಸವದ ವೇಳೆಗೆ ದಾಸೋಹ ಭವನ ನಿರ್ಮಾಣವನ್ನು ಪೂರ್ಣಗೊಳಿಸುವುದು ಕಷ್ಟವಲ್ಲ. ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ತಕ್ಕ ಕೊಡುಗೆ ನೀಡಿದರೆ ದೊಡ್ಡ ಗುರಿಯನ್ನೂ ಸಾಧಿಸಬಹುದು ಎಂದು ಹೇಳಿದರು.

### ಅನ್ನದಾನವೇ ಶ್ರೇಷ್ಠ ದಾನ: ಶ್ರೀ ಅಭಿನವ ಮಹಾಂತ ಸ್ವಾಮೀಜಿ

ಆಲವಿ ಮಠದ ಅಭಿನವ ಮಹಾಂತ ಸ್ವಾಮೀಜಿ ಮಾತನಾಡಿ, ಬರಗಾಲ ಎಂಬುದು ಕೇವಲ ಈ ಭಾಗಕ್ಕೆ ಮಾತ್ರ ಸೀಮಿತವಾದ ಸಮಸ್ಯೆಯಲ್ಲ. ವಿವಿಧ ಭಾಗಗಳಲ್ಲಿ ಅದರ ಪರಿಣಾಮ ಕಾಣಿಸಿಕೊಂಡಿದ್ದು, ಅದರ ನೇರ ಹೊಡೆತ ಹೆಚ್ಚಾಗಿ ರೈತ ಸಮುದಾಯದ ಮೇಲೆ ಬೀಳುತ್ತಿದೆ. ವ್ಯಾಪಾರ ಸೇರಿದಂತೆ ಇತರ ಕ್ಷೇತ್ರಗಳಿಗೆ ಹೋಲಿಸಿದರೆ ಕೃಷಿಯನ್ನು ಅವಲಂಬಿಸಿರುವ ಕುಟುಂಬಗಳು ಬರದಿಂದ ಹೆಚ್ಚಿನ ಸಂಕಷ್ಟಕ್ಕೆ ಒಳಗಾಗುತ್ತವೆ ಎಂದು ಹೇಳಿದರು.

ಆದರೂ ನೂರು ವರ್ಷದ ಶತಮಾನೋತ್ಸವದಲ್ಲಿ ಭಾಗವಹಿಸುವ ಅವಕಾಶ ದೊರೆತಿರುವುದು ಭಕ್ತರ ಸೌಭಾಗ್ಯ. ಇಂತಹ ಸಮಯದಲ್ಲಿ ಮಠದ ಶಾಶ್ವತ ಸೇವಾ ಕಾರ್ಯಕ್ಕೆ ಸಾಧ್ಯವಾದ ಮಟ್ಟಿಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ಅನೇಕ ಭಕ್ತರು ತಮ್ಮ ವೈಯಕ್ತಿಕ, ಕುಟುಂಬ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಹೇಳಿಕೊಳ್ಳಲು ಮಠಕ್ಕೆ ಬರುತ್ತಾರೆ. ಆಗ ಮಠದ ಪರಂಪರೆಯೇ "ಮೊದಲು ಊಟ ಮಾಡಿ ಬನ್ನಿ, ನಂತರ ನಿಮ್ಮ ಸಮಸ್ಯೆ ಕುರಿತು ಕುಳಿತು ಮಾತನಾಡೋಣ" ಎಂಬುದಾಗಿದೆ. ಹಸಿದವನಿಗೆ ಮೊದಲು ಅನ್ನ ನೀಡುವುದು ಮಠದ ಸಂಸ್ಕೃತಿ ಎಂದು ಹೇಳಿದರು.

"ದಾನಗಳಲ್ಲಿ ಅತ್ಯಂತ ಶ್ರೇಷ್ಠವಾದ ದಾನ ಅನ್ನದಾನ. ನಿರಂತರ ಅನ್ನದಾಸೋಹ ನಡೆಯುವ ಭವನ ನಿರ್ಮಾಣದಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರೆತಿರುವುದು ನಮ್ಮ ಅದೃಷ್ಟ. ಸ್ವಇಚ್ಛೆಯಿಂದ ನೂರು ಮಂದಿ ದಾನಿಗಳು ಮುಂದೆ ಬಂದು ಈ ದಾಸೋಹ ಮಂಟಪದ ಕಾರ್ಯದಲ್ಲಿ ಭಾಗಿಯಾಗಬೇಕು" ಎಂದು ಅಭಿನವ ಮಹಾಂತ ಸ್ವಾಮೀಜಿ ಕರೆ





ನೀಡಿದರು.

### ಚೀಕಲಪರ್ವಿ ಮಠದ ಗುರುತು ದಾಸೋಹ: ಶ್ರೀ ಸದಾಶಿವ ಸ್ವಾಮೀಜಿ

ಶ್ರೀ ರುದ್ರಮುನೀಶ್ವರ ಮಠದ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿ, ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠವು ತನ್ನ ಅನ್ನದಾಸೋಹ ಪರಂಪರೆಯಿಂದಲೇ ಭಕ್ತರ ನಡುವೆ ವಿಶೇಷ ಗುರುತು ಪಡೆದಿದೆ. ಮಠಕ್ಕೆ ಬರುವ ಪ್ರತಿಯೊಬ್ಬ ಭಕ್ತನಿಗೂ ಅನ್ನಪ್ರಸಾದ ನೀಡುವುದು ಹಲವು ದಶಕಗಳಿಂದ ನಡೆದುಬಂದ ಪರಂಪರೆ ಎಂದು ಹೇಳಿದರು.

ಪ್ರತಿ ವರ್ಷ ಶಿವರಾತ್ರಿ ಸಂದರ್ಭದಲ್ಲಿ ಸಾವಿರಾರು ಭಕ್ತರು ಈ ಭಾಗದ ಮೂಲಕ ಶ್ರೀಶೈಲಕ್ಕೆ ಪಾದಯಾತ್ರೆ ತೆರಳುತ್ತಾರೆ. ಅಂತಹ ಭಕ್ತರಿಗೆ ಊಟ ಮತ್ತು ವಸತಿ ಸೌಲಭ್ಯ ಒದಗಿಸಲು ಮಠವು ಸದಾ ಸಿದ್ಧವಾಗಿರಬೇಕು. ಅದೇ ರೀತಿ ಸಂಕ್ರಾಂತಿ ಸಂದರ್ಭದಲ್ಲಿ ತುಂಗಭದ್ರಾ ನದಿಯಲ್ಲಿ ಪುಣ್ಯಸ್ನಾನ ಮಾಡಲು ಸಾವಿರಾರು ಜನರು ಚೀಕಲಪರ್ವಿಗೆ ಆಗಮಿಸುತ್ತಾರೆ. ಇಂತಹ ಪುಣ್ಯಕ್ಷೇತ್ರದಲ್ಲಿ ಭಕ್ತರ ಸೇವೆ ಮಾಡುವ ಅವಕಾಶ ನಮಗೆ ದೊರೆತಿರುವುದೇ ಒಂದು ಆಶೀರ್ವಾದ ಎಂದು ಹೇಳಿದರು.

ನೂತನ ದಾಸೋಹ ಭವನ ನಿರ್ಮಾಣಕ್ಕೆ ಸುಮಾರು ₹1 ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ಕಟ್ಟಡದ ನೆಲಮಹಡಿಯನ್ನು ಸಂಪೂರ್ಣವಾಗಿ ಅನ್ನದಾಸೋಹಕ್ಕೆ ಬಳಸುವ ಉದ್ದೇಶವಿದ್ದು, ಮೊದಲ ಮಹಡಿಯನ್ನು ದೂರದ ಊರುಗಳಿಂದ ಆಗಮಿಸುವ ಭಕ್ತರ ವಸತಿಗಾಗಿ ಬಳಸಲು ಯೋಜಿಸಲಾಗಿದೆ ಎಂದು ಶ್ರೀ ಸದಾಶಿವ ಸ್ವಾಮೀಜಿ ವಿವರಿಸಿದರು.

ಮಠದ ಶತಮಾನೋತ್ಸವದ ಸಂಕೇತವಾಗಿ ನೂರು ಮಂದಿ ದಾನಿಗಳನ್ನು ಮಾತ್ರ ಈ ವಿಶೇಷ ದಾಸೋಹ ಭವನ ನಿರ್ಮಾಣದೊಂದಿಗೆ ಗುರುತಿಸಲು ನಿರ್ಧರಿಸಲಾಗಿದೆ. ಶತಮಾನೋತ್ಸವ ಎಂದರೆ ನೂರು ವರ್ಷ ಎಂಬ ಕಾರಣದಿಂದ ದಾಸೋಹ ಭವನದಲ್ಲಿ ನೂರು ದಾನಿಗಳ ಹೆಸರುಗಳನ್ನು ಮಾತ್ರ ದಾಖಲಿಸುವ ಉದ್ದೇಶವಿದೆ ಎಂದರು.

ನೂರು ಮಂದಿ ದಾನಿಗಳ ಹೆಸರು ಪೂರ್ಣಗೊಂಡ ನಂತರವೂ ಭಕ್ತರು ನೀಡುವ ದೇಣಿಗೆಯನ್ನು ಸ್ವೀಕರಿಸಲಾಗುವುದು. ಅಂತಹ ಹಣವನ್ನು ಶ್ರೀಮಠದ ಇತರ ಅಭಿವೃದ್ಧಿ ಮತ್ತು ಸೇವಾ ಕಾರ್ಯಗಳಿಗೆ ಬಳಸಲಾಗುವುದು ಎಂದು ತಿಳಿಸಿದರು.

ದಾಸೋಹ ಭವನ ನಿರ್ಮಾಣಕ್ಕೆ 2026ರ ನವೆಂಬರ್ 10ರ ನಂತರ ಭೂಮಿಪೂಜೆ ನೆರವೇರಿಸಲು ಉದ್ದೇಶಿಸಲಾಗಿದೆ. ಶತಮಾನೋತ್ಸವ ಆಚರಣೆಗೆ ಸುಮಾರು 18 ತಿಂಗಳ ಅವಧಿ ಮಾತ್ರ ಉಳಿದಿರುವುದರಿಂದ ಕಟ್ಟಡ ನಿರ್ಮಾಣ ಕಾರ್ಯವನ್ನು ಶೀಘ್ರ ಆರಂಭಿಸಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದು ಅಗತ್ಯವಾಗಿದೆ ಎಂದು ಶ್ರೀಗಳು ಹೇಳಿದರು.

**"ಮಠಕ್ಕೆ ಹತ್ತು ರೂಪಾಯಿ ದೇಣಿಗೆ ನೀಡುವ ಭಕ್ತನಿಗೂ, ಲಕ್ಷಾಂತರ ರೂಪಾಯಿ ಕೊಡುವ ದಾನಿಗೂ ಒಂದೇ ಗೌರವ. ಮಠದ ದೃಷ್ಟಿಯಲ್ಲಿ ಎಲ್ಲ ಭಕ್ತರೂ ಸಮಾನರು. ಶ್ರೀಮಠದ ಮೇಲೆ ಪ್ರತಿಯೊಬ್ಬ ಭಕ್ತನಿಗೂ ಸಮಾನ ಹಕ್ಕಿದೆ. ಯಾರನ್ನೂ ದೇಣಿಗೆ ನೀಡುವಂತೆ ಒತ್ತಾಯಿಸುವುದಿಲ್ಲ. ಸ್ವಇಚ್ಛೆಯಿಂದ ಸೇವೆ ಮಾಡುವವರು ಮುಂದೆ ಬರಬೇಕು"** ಎಂದು ಶ್ರೀ ಸದಾಶಿವ ಸ್ವಾಮೀಜಿ ಸ್ಪಷ್ಟಪಡಿಸಿದರು.

ದಾಸೋಹ ಭವನವನ್ನು ಶತಮಾನೋತ್ಸವದ ವೇಳೆಗೆ ಪೂರ್ಣಗೊಳಿಸುವ ಗುರಿ ಇರುವುದರಿಂದ ಭಕ್ತರು ವಿಳಂಬ ಮಾಡದೆ ಮುಂದೆ ಬಂದು ಸೇವೆಯಲ್ಲಿ ಭಾಗಿಯಾಗುವಂತೆ ಮನವಿ ಮಾಡಿದರು.







### ಮೊದಲ ಸಭೆಯಲ್ಲೇ 35 ದಾನಿಗಳು ಮುಂದೆ

ಪೂರ್ವಭಾವಿ ಸಭೆಯ ಮೊದಲ ದಿನವೇ ನೂತನ ದಾಸೋಹ ಭವನ ನಿರ್ಮಾಣಕ್ಕೆ ಒಟ್ಟು 35 ಮಂದಿ ದಾನಿಗಳು ತಮ್ಮ ಹೆಸರು ನೋಂದಾಯಿಸಿರುವುದು ವಿಶೇಷವಾಗಿತ್ತು. ಈ ಪೈಕಿ 10 ಮಂದಿ ತಮ್ಮ ಹೆಸರನ್ನು ಬಹಿರಂಗಪಡಿಸದೆ ದೇಣಿಗೆ ನೀಡಲು ಇಚ್ಛಿಸಿದ್ದಾರೆ. ಹೆಸರು ನೋಂದಾಯಿಸಿರುವವರು ಮುಂದಿನ ದಿನಗಳಲ್ಲಿ ಶ್ರೀಮಠಕ್ಕೆ ತಮ್ಮ ದೇಣಿಗೆಯನ್ನು ಸಲ್ಲಿಸಲಿದ್ದಾರೆ.

**ಸಭೆಯಲ್ಲೇ ಶ್ರೀಮತಿ ನಂದಮ್ಮ ಖಕರಗಲ್ ಅವರು ಮೊದಲಿಗರಾಗಿ ದೇಣಿಗೆಯನ್ನು ಸಲ್ಲಿಸುವ ಮೂಲಕ ದಾಸೋಹ ಭವನ ನಿರ್ಮಾಣದ ಸೇವಾ ಕಾರ್ಯಕ್ಕೆ ಕೈಜೋಡಿಸಿದರು.**

ಹೆಸರು ನೋಂದಾಯಿಸಿರುವ ದಾನಿಗಳಲ್ಲಿ **ಶ್ರೀ ಜೀವನೇಶ್ವರಯ್ಯ ಹಿರೇಮಠ, ಶ್ರೀಮತಿ ನಂದಮ್ಮ ಖಕರಗಲ್, ಲಿಂ. ಚನ್ನಪ್ಪಗೌಡ ಪಂಪನಗೌಡ ಶಿವಪೂಜಿ ಸ್ಮರಣಾರ್ಥ, ಲಿಂ. ರುದ್ರಪ್ಪಗೌಡ ಪಂಪನಗೌಡ ಶಿವಪೂಜಿ ಸ್ಮರಣಾರ್ಥ, ಲಿಂ. ಈರಪ್ಪಗೌಡ ಪಂಪನಗೌಡ ಶಿವಪೂಜಿ ಸ್ಮರಣಾರ್ಥ, ಶಿವರಾಜಗೌಡ ಸಂಗಾಪುರ, ಸಂಗಪ್ಪಗೌಡ ಪಂಪನಗೌಡ ಶಿವಪೂಜಿ, ಶ್ರೀಮತಿ ಬಸಮ್ಮ ಚಿದಂಬರಗೌಡ ಮಾಲಿಪಾಟೀಲ, ಗಂಗಮ್ಮ ಮಲ್ಲಪ್ಪ ಅಂಕುಶದೊಡ್ಡಿ, ಮಾಂತಮ್ಮ ಶಂಕರಗೌಡ ಕುರಾಕುಂದಿ, ಶ್ರೀಮತಿ ಅನ್ನಪೂರ್ಣ ರಾಮನಗೌಡ ಮುದ್ದನಗುಡ್ಡಿ, ಶ್ರೀಮತಿ ಯಲ್ಲಮ್ಮ ಬಸನಗೌಡ ಕಣ್ಣೂರು, ರುದ್ರಪ್ಪಗೌಡ ಗೋನವರ, ಲಿಂ. ಮಂತ್ರಿ ಬಸವರಾಜಪ್ಪಗೌಡ ಕಪಗಲ್ ಸ್ಮರಣಾರ್ಥ, ವಿರೂಪಾಕ್ಷರೆಡ್ಡಿ ಬಳ್ಳಾರಿ, ಮಲ್ಲಿಕಾರ್ಜುನರೆಡ್ಡಿ, ನಾಗಪ್ಪ ಪೋತ್ನಾಳ, ಶಂಕರಗೌಡ ಮದ್ಲಾಪುರ, ಬಸವರಾಜಪ್ಪ ಅಮರಾವತಿ, ವೀರಭದ್ರಗೌಡ ಕಾತರಕಿ, ಲಿಂ. ಗುರುಬಸಯ್ಯ ಗಂಗಯ್ಯ ಹೊಸಮಠ ಸ್ಮರಣಾರ್ಥ, ಶ್ರೀಮತಿ ನೀತಾ ವೀರಭದ್ರಯ್ಯ ಹಿರೇಮಠ, ವಸಂತರಾವ್ ಗೌರಿಹರ ಖೇರಡರ್ಕ, ಸದಾಶಿವ ಶಿವಪ್ಪಯ್ಯನವರಮಠ ಹಾಗೂ ಶ್ರೀ ವಿಶ್ವನಾಥೇಶ್ವರ ಶಿಕ್ಷಣ ಸಂಸ್ಥೆ ತೀಡಿಗೋಳ** ನೀಡಿಗೋಳ ಸೇರಿದ್ದಾರೆ.

ಒಟ್ಟು ನೂರು ದಾನಿಗಳ ಗುರಿಯಲ್ಲಿ ಮೊದಲ ಸಭೆಯಲ್ಲೇ 35 ಮಂದಿ ಹೆಸರು ನೀಡಿದ್ದು, ಇನ್ನೂ 65 ಮಂದಿಗೆ ಅವಕಾಶ ಉಳಿದಿದೆ. ಮುಂದೆ ಬರುವ ದಾನಿಗಳ ಹೆಸರುಗಳನ್ನೂ ದಾಸೋಹ ಭವನದಲ್ಲಿ ದಾಖಲಿಸಲಾಗುವುದು ಎಂದು ಮಠದ ವತಿಯಿಂದ ತಿಳಿಸಲಾಯಿತು.

ಸಭೆಯಲ್ಲಿ ಚೀಕಲಪರ್ವಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು, ಮುಖಂಡರು, ರೈತರು, ಉದ್ಯಮಿಗಳು, ವಿವಿಧ ಕ್ಷೇತ್ರಗಳ ಗಣ್ಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಸಭೆಯಲ್ಲಿ ಪಾಲ್ಗೊಂಡ ಬಹುತೇಕರು ನೂತನ ದಾಸೋಹ ಭವನ ನಿರ್ಮಾಣದ ಬಗ್ಗೆ ಸಕಾರಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿ.

---

# ₹8.80 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಮಾನ್ವಿ: ತಾಲೂಕಿನ ಹಿರೇಕೊಟ್ನೆಕಲ್ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು ಶಂಕುಸ್ಥಾಪನೆ ನೆರವೇರಿಸಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಗ್ರಾಮಗಳ ಅಗತ್ಯಗಳನ್ನು ಗುರುತಿಸಿ ಮೂಲಸೌಕರ್ಯಗಳನ್ನು ಕಲ್ಪಿಸುವ ಮೂಲಕ ಜನರ ಜೀವನಮಟ್ಟ ಸುಧಾರಿಸುವ ಉದ್ದೇಶದಿಂದ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಹಿರೇಕೊಟ್ನೆಕಲ್ ಗ್ರಾಮದಲ್ಲಿ ಕೆಕೆಆರ್‌ಡಿಬಿ ಯೋಜನೆಯಡಿ ₹85 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ, ಗ್ರಾಮದ ವಿಜಯ ಮಹಾಂತೇಶ್ವರ ಮಠದ ಅಭಿವೃದ್ಧಿಗೆ ₹25 ಲಕ್ಷ ಹಾಗೂ ಆಜಾದಿ ಅಮೃತ ಮಹೋತ್ಸವ ಶಾಲೆಯ ಅಭಿವೃದ್ಧಿಗೆ ₹5 ಲಕ್ಷ ಸೇರಿದಂತೆ ಒಟ್ಟು ₹1.15 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಇದರೊಂದಿಗೆ ಮುದನೂರು ಗ್ರಾಮದಲ್ಲಿ ₹4.60 ಕೋಟಿ ಹಾಗೂ ಕಾತರಕಿ ಗ್ರಾಮದಲ್ಲಿ ₹3 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಶಾಲಾ ಕೊಠಡಿ ನಿರ್ಮಾಣ, ಗ್ರಾಮೀಣ ರಸ್ತೆ ಅಭಿವೃದ್ಧಿ, ಸಿಸಿ ರಸ್ತೆ, ಚರಂಡಿ ನಿರ್ಮಾಣ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳನ್ನು ಒಳಗೊಂಡಂತೆ ಒಟ್ಟು ₹8.80 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಗಾಫೂರ್ ಸಾಬ್, ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ಕೆ. ಅಮರೇಶಪ್ಪ, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ದೊಡ್ಡಬಸಪ್ಪಗೌಡ, ಸತ್ಯನಾರಾಯಣ, ಅಮರೇಶ್ ವರಕ್ಯಾಂಪ್, ಮಾಲಿಗೌಡ, ಪ್ರಗತಿಪರ ರೈತ ರವಿಬಾಬು, ಶರಣಯ್ಯ ನಾಯಕ, ವಕೀಲ ಸಿದ್ದಲಿಂಗಪ್ಪ, ಬಾಬುರೆಡ್ಡಿ, ಸಂಗಮೇಶ, ಮಹಾದೇವಪ್ಪಗೌಡ ಕಟಾಲಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿಗೆ ₹1.97 ಕೋಟಿ ನಿವ್ವಳ ಲಾಭ: ಎಂ. ಈರಣ್ಣ




ಮಾನ್ವಿ: ಪಟ್ಟಣದ ಫ್ರೆಂಡ್ಸ್ ಫಂಕ್ಷನ್ ಹಾಲ್‌ನಲ್ಲಿ ನಡೆದ ಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿ ಸಂಘದ 16ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಕರ್ನಾಟಕ ರಾಜ್ಯ ಕುರುಬರ ಸಂಘದ ರಾಜ್ಯಾಧ್ಯಕ್ಷ ಹಾಗೂ ಸಹಕಾರಿಯ ಅಧ್ಯಕ್ಷ ಎಂ. ಈರಣ್ಣ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಜನರ ಅಭಿವೃದ್ಧಿಯನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡು ಕೇವಲ ₹11 ಲಕ್ಷ ಬಂಡವಾಳದಿಂದ ಆರಂಭವಾದ ಸಹಕಾರಿ ಸಂಘವು ಇಂದು ಯಶಸ್ವಿಯಾಗಿ ಬೆಳೆದು ನಿಂತಿದೆ ಎಂದರು. ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯ ಸಹಕಾರದ ಜೊತೆಗೆ ಸಂಘದಿಂದ ವಿವಿಧ ಸಾಲಗಳನ್ನು ಪಡೆದ ಸದಸ್ಯರು ಪ್ರಾಮಾಣಿಕವಾಗಿ ಮರುಪಾವತಿ ಮಾಡಿರುವುದರಿಂದ ಕಳೆದ 16 ವರ್ಷಗಳಿಂದ ಸಹಕಾರಿ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ ಎಂದು ಹೇಳಿದರು.

ಪ್ರಸ್ತುತ ಸಹಕಾರಿಯಲ್ಲಿ 10 ಸಾವಿರಕ್ಕೂ ಹೆಚ್ಚು ಸದಸ್ಯರಿದ್ದು, ₹110 ಕೋಟಿ ದುಡಿಯುವ ಬಂಡವಾಳ ಹೊಂದಿದೆ. ಸಂಘವು ₹1.97 ಕೋಟಿ ನಿವ್ವಳ ಲಾಭ ಗಳಿಸಿದ್ದು, ಈ ಬಾರಿ ಸದಸ್ಯರಿಗೆ ಶೇ.15ರಷ್ಟು ಲಾಭಾಂಶ ವಿತರಿಸಲು ನಿರ್ಧರಿಸಲಾಗಿದೆ ಎಂದು ಎಂ. ಈರಣ್ಣ ತಿಳಿಸಿದರು.

ಸಭೆಯಲ್ಲಿ ಸಹಕಾರಿಯೊಂದಿಗೆ ಉತ್ತಮ ವ್ಯವಹಾರ ನಡೆಸಿದ ಸದಸ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಬೀರಪ್ಪ ತಾತ ಅವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಸಹಕಾರಿಯ ಸಿಇಒ ಬಸವರಾಜ, ವ್ಯವಸ್ಥಾಪಕ ಜಗನ್ನಾಥ ಕುಮಾರ ಕೆ., ಉಪಾಧ್ಯಕ್ಷ ಡಿ. ಆದಿನಾರಾಯಣ, ಷಣ್ಮುಖಾಚಾರ, ಜಿ.ಬಿ. ಬೊಮ್ಮನಾಳ, ಬಚ್ಚಣ್ಣ ಕೆ. ಗುಡದಿನ್ನಿ, ಶಂಶೀರ್ ಖಾನ್, ಹನುಮಂತಪ್ಪ ಕಾಟ್ಟಿಕಾರ್, ಲಕ್ಷ್ಮೀಪತಿ ಪಾಟೀಲ್, ನರಸಪ್ಪ, ರಾಜೇಶ್ವರಿ, ಗೀತಾ, ಡಾ. ಪೂಜಾ, ಎಂ. ಶಿವಕುಮಾರ, ಬುಡ್ಡಣ್ಣ, ಈರಣ್ಣ, ಸಿದ್ರಾಮಪ್ಪ, ಬಸವರಾಜ ಪಾಟೀಲ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಸರ್ಕಾರಿ ಶಾಲಾ ಮಕ್ಕಳಿಗೆ ಕಲಿಕಾ ಕಿಟ್, ಪ್ರೋತ್ಸಾಹ ಧನ ವಿತರಣೆ



ಹಟ್ಟಿ ಚಿನ್ನದ ಗಣಿ: ಸಮೀಪದ ಹಿರೇನಗನೂರು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕನ್ನಡ ಮಾಧ್ಯಮದ ಒಂದನೇ ತರಗತಿಗೆ ಹೊಸದಾಗಿ ದಾಖಲಾದ 22 ಮಕ್ಕಳಿಗೆ ಉಚಿತವಾಗಿ ಬ್ಯಾಗ್, ನೋಟ್‌ಬುಕ್ ಹಾಗೂ ಪೆನ್ಸಿಲ್ ಒಳಗೊಂಡ ಕಲಿಕಾ ಕಿಟ್‌ಗಳನ್ನು ಶಿಕ್ಷಣ ಪ್ರೇಮಿ ಹಾಗೂ ಸಮಾಜ ಸೇವಕ ಮೌನುದ್ದೀನ್ ಬೂದಿನಾಳ ವಿತರಿಸಿದರು.

ಇದೇ ವೇಳೆ ಚುಕ್ಕನಟ್ಟಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಒಂದನೇ ತರಗತಿಗೆ ದಾಖಲಾದ ಮಕ್ಕಳಿಗೂ ಕಲಿಕಾ ಕಿಟ್‌ಗಳ ಜೊತೆಗೆ ತಲಾ ₹1,000 ಪ್ರೋತ್ಸಾಹ ಧನ ನೀಡಲಾಯಿತು.

ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಬಡ ಹಾಗೂ ಮಧ್ಯಮ ವರ್ಗದ ಮಕ್ಕಳಿಗೆ ಶಿಕ್ಷಣದ ಆರಂಭದಲ್ಲೇ ಉತ್ತೇಜನ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಹೊಸ ಬ್ಯಾಗ್‌ಗಳು ಮತ್ತು ಕಲಿಕಾ ಸಾಮಗ್ರಿಗಳನ್ನು ಪಡೆದ ಮಕ್ಕಳಲ್ಲಿ ಸಂತಸ ಕಂಡುಬಂತು.

ಈ ಸಂದರ್ಭದಲ್ಲಿ ಮಾತನಾಡಿದ ಮೌನುದ್ದೀನ್ ಬೂದಿನಾಳ, ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವುದು ಸಮಾಜದ ಜವಾಬ್ದಾರಿಯಾಗಿದೆ. ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಉತ್ತಮ ಕಲಿಕಾ ವಾತಾವರಣ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸಿದರೆ ಅವರು ಉತ್ಸಾಹದಿಂದ ಶಾಲೆಗೆ ಬರುತ್ತಾರೆ. ಮಕ್ಕಳ ಶಿಕ್ಷಣಕ್ಕೆ ತಮ್ಮಿಂದಾದ ಸಹಾಯವನ್ನು ಮುಂದೆಯೂ ನಿರಂತರವಾಗಿ ನೀಡುವುದಾಗಿ ಹೇಳಿದರು.

ಶಾಲೆಯ ಪ್ರಭಾರಿ ಮುಖ್ಯಗುರು ಮಮತಾ ಮಾತನಾಡಿ, ಸರ್ಕಾರಿ ಶಾಲಾ ಮಕ್ಕಳ ಮೇಲಿನ ಕಾಳಜಿಯಿಂದ ಪ್ರತಿ ವರ್ಷವೂ ಕಲಿಕಾ ಸಾಮಗ್ರಿಗಳನ್ನು ನೀಡುತ್ತಿರುವ ದಾನಿಗಳ ಕಾರ್ಯ ಶ್ಲಾಘನೀಯ. ಇಂತಹ ಸಹಕಾರ ಸರ್ಕಾರಿ ಶಾಲೆಗಳ ಬಲವರ್ಧನೆಗೆ ನೆರವಾಗುತ್ತದೆ ಎಂದು ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಬಸವರಾಜಪ್ಪ ಕುರುಗೋಡ್, ಮಹಿಬೂಬ್ ಸಾಬ್ ಶರಣರು, ನಿಂಗಪ್ಪ ಹುಬ್ಬಳ್ಳಿ, ಅಬ್ರಹಾಂ ಸಲಬೂರು, ಆನಂದ್ ಕಂದಳ್ಳಿ, ಶಾಲೆಯ ಶಿಕ್ಷಕ ವೃಂದ, ಎಸ್‌ಡಿಎಂಸಿ ಅಧ್ಯಕ್ಷೆ ಗೌರಮ್ಮ ಬಸವರಾಜ್, ಪದಾಧಿಕಾರಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

# ಜ್ಞಾನ, ವ್ಯಕ್ತಿತ್ವ ಮತ್ತು ಸಂಸ್ಕಾರ ರೂಪಿಸುವವರೇ ಶಿಕ್ಷಕರು: ಪ್ರೊ. ಶಿವಾನಂದ ಕೆಳಗಿನಮನಿ

ರಾಯಚೂರು, ಸೆ.20: ಅಜ್ಞಾನದ ಕತ್ತಲೆಯನ್ನು ದೂರ ಮಾಡಿ ಜ್ಞಾನದ ಬೆಳಕನ್ನು ಬೆಳಗಿಸುವವರೇ ಶಿಕ್ಷಕರು. ವ್ಯಕ್ತಿಯ ಯಶಸ್ಸಿನ ಹಿಂದೆ ಗುರುಗಳ ಮಾರ್ಗದರ್ಶನ ಮತ್ತು ಶ್ರಮ ಅಪಾರವಾಗಿದ್ದು, ಶಿಕ್ಷಣವು ಕೇವಲ ಅಕ್ಷರ ಜ್ಞಾನಕ್ಕೆ ಸೀಮಿತವಾಗದೆ ವ್ಯಕ್ತಿಯ ಜ್ಞಾನ, ವ್ಯಕ್ತಿತ್ವ ಮತ್ತು ಸಂಸ್ಕಾರವನ್ನು ರೂಪಿಸುವ ಮಹತ್ವದ ಸಾಧನವಾಗಿದೆ ಎಂದು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಿವಾನಂದ ಕೆಳಗಿನಮನಿ ಹೇಳಿದರು.




ಕಲಾ ಸಂಕುಲ ಸಂಸ್ಥೆ ರಾಯಚೂರು ಹಾಗೂ ಕಲ್ಯಾಣ ಕರ್ನಾಟಕ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಜ್ಯಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣವು ಮಾನವನ ಸರ್ವತೋಮುಖ ಬೆಳವಣಿಗೆ ಹಾಗೂ ಸಮಾಜದ ಪ್ರಗತಿಗೆ ಭದ್ರ ತಳಹದಿಯಾಗಿದೆ. ಉತ್ತಮ ಶಿಕ್ಷಣವು ವ್ಯಕ್ತಿಗೆ ಸೂಕ್ತ ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳನ್ನು ಕಲ್ಪಿಸಿ ಆರ್ಥಿಕ ಸ್ಥಿರತೆಯನ್ನು ನೀಡುತ್ತದೆ. ಗುರು ಎಂದರೆ ಕೇವಲ ಅಕ್ಷರ ಕಲಿಸುವ ಶಿಕ್ಷಕನಲ್ಲ, ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಿ ಜ್ಞಾನವೆಂಬ ಬೆಳಕಿನತ್ತ ಕರೆದೊಯ್ಯುವ ದಾರಿದೀಪ ಎಂದು ಹೇಳಿದರು.

ಲೌಕಿಕ ಶಿಕ್ಷಣ ಜೀವನ ಸಾಗಿಸಲು ದಾರಿ ತೋರಿಸಿದರೆ, ಗುರುವಿನ ಮಾರ್ಗದರ್ಶನ ಜೀವನದ ನಿಜವಾದ ಉದ್ದೇಶವನ್ನು ಅರಿತುಕೊಳ್ಳಲು ಸಹಾಯ ಮಾಡುತ್ತದೆ. ಸರಿ-ತಪ್ಪಿನ ವ್ಯತ್ಯಾಸವನ್ನು ತಿಳಿದು ಧರ್ಮ ಹಾಗೂ ಮೌಲ್ಯಗಳ ಮಾರ್ಗದಲ್ಲಿ ನಡೆಯಲು ಗುರುವಿನ ಪ್ರೇರಣೆ ಅತ್ಯವಶ್ಯಕ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನೆರವೇರಿಸಲು ಆಗಮಿಸಿದ್ದ ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕದ ನಿರ್ದೇಶಕ ಡಾ. ಸತೀಶ್ ಕುಮಾರ್ ಹೊಸಮನಿ ಮಾತನಾಡಿ, ಕಲಾ ಸಂಕುಲ ಸಂಸ್ಥೆಯು ರಾಜ್ಯದಲ್ಲಿಯೇ ಮಾದರಿ ಸಂಸ್ಥೆಯಾಗಿ ಗುರುತಿಸಿಕೊಂಡಿದೆ. ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡಪರ ಹಲವಾರು ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಶಿಕ್ಷಕರನ್ನು ಗುರುತಿಸಿ ಗೌರವಿಸುವ ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಶಿಕ್ಷಕರ ಸೇವೆಗೆ ಹೆಚ್ಚಿನ ಮೌಲ್ಯ ನೀಡುತ್ತವೆ. ನಿಸ್ವಾರ್ಥ ಸೇವೆಯನ್ನು ಗುರುತಿಸುವ ಕಾರ್ಯಕ್ರಮಗಳನ್ನು ವಿವಿಧ ಸಂಘಟನೆಗಳು ನಿರಂತರವಾಗಿ ಆಯೋಜಿಸಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಕಿರುತೆರೆ ನಟಿ ರಜನಿ, ಪುಷ್ಪ, ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀದೇವಿ ಆರ್.ವಿ. ನಾಯಕ್, ಕೆಪಿಸಿಸಿ ಕಾರ್ಯದರ್ಶಿ ಕೆ. ಅಸ್ಲಾಂ ಪಾಷಾ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣ ಸಾವಂತಗೆರೆ, ಜಿಲ್ಲಾ ಕಾರಾಗೃಹ ಇಲಾಖೆಯ ಅನಿತಾ ಹಿರೇಮನಿ, ಕಲ್ಯಾಣ ಕರ್ನಾಟಕ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಟ್ರಸ್ಟ್ ಗೌರವ ಅಧ್ಯಕ್ಷ ಬಿ. ಬಸವರಾಜ್, ಗೌರವ ಸಲಹೆಗಾರ ರಾಜಶೇಖರದಿನ್ನಿ, ಅಧ್ಯಕ್ಷ ಕೆ. ಅಯ್ಯಣ್ಣ ವಡವಾಟಿ, ಉಪಾಧ್ಯಕ್ಷ ವಿ. ಜಗದೀಶ್, ಪ್ರಧಾನ ಕಾರ್ಯದರ್ಶಿ ಡಿ. ಶ್ರೀನಿವಾಸ್, ಸಂಘಟನಾ ಕಾರ್ಯದರ್ಶಿ ವೆಂಕಟೇಶ ಇಡಪನೂರು, ಜಂಟಿ ಕಾರ್ಯದರ್ಶಿ ವಿರೂಪಾಕ್ಷಿ ಕೊರವಿಹಾಳ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲಾ ಸಂಕುಲ ಸಂಸ್ಥೆಯ ಅಧ್ಯಕ್ಷೆ ರೇಖಾ ಬಡಿಗೇರ್ ವಹಿಸಿದ್ದರು. ಜಿಲ್ಲಾ ನ್ಯಾಯವಾದಿಗಳ ಸಂಘದ ನೂತನ ಅಧ್ಯಕ್ಷ ಎನ್. ಶಿವಶಂಕರ ಹಾಗೂ ದೇವದುರ್ಗದ ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕ ಸುರೇಶ ಅವರಿಗೆ ಗೌರವ ಸನ್ಮಾನ ನೆರವೇರಿಸಲಾಯಿತು. ಇದೇ ವೇಳೆ ವಿವಿಧ ಶಿಕ್ಷಕರಿಗೆ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ನರೇಂದ್ರ ಮತ್ತು ಝಾನ್ಸಿ ರಾಣಿ ನಾಡಗೀತೆಯನ್ನು ಪ್ರಸ್ತುತಪಡಿಸಿದರು. ಕಲಾ ಸಂಕುಲ ಸಂಸ್ಥೆಯ ಕಾರ್ಯದರ್ಶಿ ಮಾರುತಿ ಬಡಿಗೇರ್ ಸ್ವಾಗತಿಸಿದರು. ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಕನ್ನಡ ಸಹಾಯಕ ಪ್ರಾಧ್ಯಾಪಕಿ ಡಾ. ಶಿವಲೀಲಾ ಬಿ. ಕಾರ್ಯಕ್ರಮ ನಿರೂಪಿಸಿದರು.

# ಪತ್ತಿನ ಸಹಕಾರ ಸಂಘಕ್ಕೆ ₹64.92 ಲಕ್ಷ ನಿವ್ವಳ ಲಾಭ: ಶಿವಾನಂದ ಚುಕ್ಕಿ

ಸಿರವಾರ, ಸೆ.20: ಚಿಕ್ಕ ಹಾಗೂ ಮಧ್ಯಮ ವ್ಯಾಪಾರಸ್ಥರಿಗೆ ಕಳೆದ 19 ವರ್ಷಗಳಿಂದ ಸಾಲ ಸೌಲಭ್ಯ ಒದಗಿಸುತ್ತಿರುವ ಸಿರವಾರ ಪತ್ತಿನ ಸಹಕಾರ ಸಂಘ ನಿಯಮಿತವು ಪ್ರಸಕ್ತ ಸಾಲಿನಲ್ಲಿ ₹64,92,719 ನಿವ್ವಳ ಲಾಭ ಗಳಿಸಿದ್ದು, ಷೇರುದಾರರಿಗೆ ಶೇ.19ರಷ್ಟು ಲಾಭಾಂಶ ವಿತರಿಸಲಾಗುವುದು ಎಂದು ಸಂಘದ ಅಧ್ಯಕ್ಷ ಶಿವಾನಂದ ಚುಕ್ಕಿ ಹೇಳಿದರು.




ಪಟ್ಟಣದ ನವಸುಂದಿ ಕಾಂಪ್ಲೆಕ್ಸ್ ನಲ್ಲಿರುವ ಸಂಘದ ಪ್ರಧಾನ ಕಚೇರಿಯಲ್ಲಿ ನಡೆದ 19ನೇ ವಾರ್ಷಿಕ ಮಹಾಸಭೆಯನ್ನು ಶ್ರೀ ಬಸವೇಶ್ವರ, ಸಹಕಾರಿ ಸಂಸ್ಥಾಪಕ ಕಣಿಗಿಹಾಳ ಸಿದ್ದನಗೌಡ ಹಾಗೂ ಸಂಸ್ಥಾಪಕ ಆರ್.ಕೆ. ಚನ್ನಬಸವ ಸಾಹುಕಾರ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಆರ್.ಕೆ. ಚನ್ನಪ್ಪ ಅವರಿಂದ ಆರಂಭವಾದ ಈ ಸಹಕಾರಿ ಸಂಸ್ಥೆ 19 ವರ್ಷಗಳ ಪಯಣ ಪೂರೈಸಿದ್ದು, ಸದಸ್ಯರು ಹಾಗೂ ಗ್ರಾಹಕರ ಸಹಕಾರದಿಂದ ನಿರಂತರವಾಗಿ ಬೆಳವಣಿಗೆ ಸಾಧಿಸಿದೆ. ಸಾಲ ಪಡೆದವರು ಹಾಗೂ ಜಾಮೀನುದಾರರು ಸಕಾಲಕ್ಕೆ ಸಾಲ ಮರುಪಾವತಿ ಮಾಡುವುದರಿಂದ ಸಹಕಾರಿಗೆ ಮತ್ತಷ್ಟು ಜನರಿಗೆ ಸಾಲ ನೀಡಲು ಸಾಧ್ಯವಾಗುತ್ತದೆ. ಸಿಬ್ಬಂದಿ ವರ್ಗವೂ ಉತ್ತಮವಾಗಿ ಕಾರ್ಯನಿರ್ವಹಿಸಿರುವುದರಿಂದ ಈ ಬಾರಿ ₹64.92 ಲಕ್ಷಕ್ಕೂ ಅಧಿಕ ನಿವ್ವಳ ಲಾಭ ಗಳಿಸಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಸಹಕಾರಿ ಸಂಸ್ಥೆಯ ಲಾಭದ ಒಂದು ಭಾಗವನ್ನು ಸಮಾಜಮುಖಿ ಕಾರ್ಯಗಳಿಗೆ ಬಳಸಲಾಗುತ್ತಿದೆ. ಈ ಹಿಂದೆ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಆರ್ಥಿಕ ನೆರವು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ತುಂಗಭದ್ರಾ ಉಳಿಸಿ ಅಭಿಯಾನಕ್ಕೆ ಸಹಾಯ ಸೇರಿದಂತೆ ಹಲವು ಸೇವಾ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಎಸಿ ಶವಪೆಟ್ಟಿಗೆಯನ್ನು ದೇಣಿಗೆಯಾಗಿ ನೀಡುವ ಉದ್ದೇಶವಿದೆ ಎಂದು ಹೇಳಿದರು.

ರಾಯಚೂರು ನಗರದ ಗಂಜ್ ಸರ್ಕಲ್ ಹಾಗೂ ಶಕ್ತಿನಗರದಲ್ಲಿ ಎರಡು ಹೊಸ ಶಾಖೆಗಳನ್ನು ಆರಂಭಿಸುವ ಯೋಜನೆ ಇದೆ. ಇದರಿಂದ ಸ್ಥಳೀಯರಿಗೆ ಆರ್ಥಿಕ ಸೇವೆ ದೊರೆಯುವುದರ ಜೊತೆಗೆ ಕೆಲವರಿಗೆ ಉದ್ಯೋಗಾವಕಾಶವೂ ಸೃಷ್ಟಿಯಾಗಲಿದೆ ಎಂದು ಶಿವಾನಂದ ಚುಕ್ಕಿ ತಿಳಿಸಿದರು.

"ಬ್ಯಾಂಕಿನ ಬಗ್ಗೆ ಹರಡುವ ಊಹಾಪೋಹಗಳಿಗೆ ಜನರು ಕಿವಿಗೊಡಬಾರದು. ಸದಸ್ಯರ ಷೇರು ಹಾಗೂ ಠೇವಣಿಗಳಿಗೆ ನಾವು ಜವಾಬ್ದಾರರಾಗಿದ್ದೇವೆ. ಇದುವರೆಗೆ ನೀಡಿದ ಸಹಕಾರವನ್ನು ಮುಂದೆಯೂ ನೀಡಬೇಕು'' ಎಂದು ಮನವಿ ಮಾಡಿದರು.

ಗ್ರಾಹಕ ನಿಂಬಯ್ಯಸ್ವಾಮಿ ಮಾತನಾಡಿ, ಪಟ್ಟಣದಲ್ಲಿರುವ ಎಲ್ಲಾ ಸಹಕಾರಿ ಸಂಘಗಳು ಒಟ್ಟಾಗಿ ಸಾರ್ವಜನಿಕ ಉಪಯೋಗಕ್ಕಾಗಿ ಶವಸಂಸ್ಕಾರ ವಾಹನವನ್ನು ದೇಣಿಗೆಯಾಗಿ ನೀಡಬೇಕು ಎಂದು ಸಲಹೆ ನೀಡಿದರು.

ನಿರ್ದೇಶಕರಾದ ಅಮರೇಶ ಜೆ. ಹಾಗೂ ಶಿವಕುಮಾರ ಚುಕ್ಕಿ ಮಾತನಾಡಿದರು. ಈ ಸಂದರ್ಭದಲ್ಲಿ ಎಂ. ಶ್ರೀನಿವಾಸ, ಶೋಭಾ ಬ್ರೀಜೇಶ ಪಾಟೀಲ್, ಬಸವರಾಜ ದಳಪತಿ, ಮಲ್ಲಿಕಾರ್ಜುನ ಹೂಗಾರ, ದೇವಿಪುತ್ರಪ್ಪ, ಬಸ್ಸಮ್ಮ ಟಿ. (ಸಂತೋಷ ಟಿ.), ಸಿಇಒ ವಿಶ್ವನಾಥ ನಂದರೆಡ್ಡಿ, ಶಿವರಾಜಪ್ಪ ಸೇರಿದಂತೆ ನಿರ್ದೇಶಕರು, ಸಿಬ್ಬಂದಿ ಮತ್ತು ಗ್ರಾಹಕರು ಉಪಸ್ಥಿತರಿದ್ದರು. ಶಿವರಾಜಪ್ಪ ವಾರ್ಷಿಕ ವರದಿ ವಾಚಿಸಿದರು.

# ಸಮಸ್ಯೆಗಳ ತ್ವರಿತ ಪರಿಹಾರಕ್ಕೆ 'ಪ್ರಜಾಸೇವೆ ಆಂದೋಲನ' ಸದ್ಬಳಕೆ ಮಾಡಿಕೊಳ್ಳಿ: ತಹಶಿಲ್ದಾರ ಅಶೋಕ್ ಶಿಗ್ಗಾವಿ

ಕೊಪ್ಪಳ,(ಕರ್ನಾಟಕ ವಾರ್ತೆ): ಸಾರ್ವಜನಿಕರು ತಮ್ಮ ಸಮಸ್ಯೆಗಳ ತ್ವರಿತ ಪರಿಹಾರಕ್ಕೆ 'ಪ್ರಜಾಸೇವೆ ಆಂದೋಲನ' ಸಭೆಯ ಸದ್ಬಳಕೆ ಮಾಡಿಕೊಳ್ಳಬೇಕೆಂದು ಕುಷ್ಟಗಿ ತಹಶಿಲ್ದಾರರಾದ ಅಶೋಕ್ ಶಿಗ್ಗಾವಿ ಅವರು ಹೇಳಿದರು.




ಪ್ರಜಾಸೇವಾ ಇಲಾಖೆ ಹಾಗೂ ಕುಷ್ಟಗಿ ತಾಲ್ಲೂಕು ಆಡಳಿತದ ಸಹಯೋಗದಲ್ಲಿ ಕುಷ್ಟಗಿ ಪುರಸಭೆ ಕಾರ್ಯಾಲಯದ ಆವರಣದಲ್ಲಿ ಶನಿವಾರ (ಸೆ. 19ರಂದು) ಆಯೋಜಿಸಲಾಗಿದ್ದ ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ನೂತನವಾಗಿ ಜಾರಿಗೆ ತಂದಿರುವ ಪ್ರಜಾಸೇವೆ ಆಂದೋಲನವನ್ನು ತಾಲೂಕು, ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಸಾರ್ವಜನಿಕರು ಸರ್ಕಾರದ ವಿವಿಧ ಸೌಲಭ್ಯಗಳನ್ನು ಸುಲಭವಾಗಿ ಪಡೆಯಲು ಹಾಗೂ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇದೊಂದು ಉತ್ತಮ ವೇದಿಕೆಯಾಗಿದೆ. ಸಾರ್ವಜನಿಕರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಪದೇಪದೇ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಸರ್ಕಾರದ ಸೇವೆಗಳನ್ನು ಜನರ ಮನೆಬಾಗಿಲಿಗೆ ತಲುಪಿಸುವುದು ಪ್ರಜಾಸೇವೆ ಆಂದೋಲನದ ಪ್ರಮುಖ ಉದ್ದೇಶವಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕುಷ್ಟಗಿ ತಾಲೂಕು ಪಂಚಾಯತ್ ಇಒ ಅಮರೇಶ್ ಅವರು ಮಾತನಾಡಿ, ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ ಎಂಬ ಧ್ಯೇಯವಾಕ್ಯದೊಂದಿಗೆ ನಡೆಯುತ್ತಿರುವ ಪ್ರಜಾಸೇವೆ ಆಂದೋಲನವು ಸಾರ್ವಜನಿಕರ ಸಮಸ್ಯೆಗಳಿಗೆ ಸರ್ಕಾರದ ವಿವಿಧ ಇಲಾಖೆಗಳ ಮೂಲಕ ತ್ವರಿತ ಪರಿಹಾರ ಒದಗಿಸುವ ಮಹತ್ವದ ವೇದಿಕೆಯಾಗಿದೆ ಎಂದರು.

ಕುಷ್ಟಗಿ ಹೋಬಳಿ ವ್ಯಾಪ್ತಿಯಲ್ಲಿ ಬೀಜಕಲ್, ದೋಟಿಹಾಳ, ಕೇಸೂರು, ಶಿರಗುಂಪಿ, ಮುದೇನೂರು, ಕಂದಕೂರು, ಹಿರೇ ಮನ್ನಾಪುರ, ಗುಮಗೇರಿ ಸೇರಿದಂತೆ ಒಟ್ಟು 8 ಗ್ರಾಮ ಪಂಚಾಯಿತಿಗಳು ಒಳಗೊಂಡಿವೆ. ಈ ವ್ಯಾಪ್ತಿಯ ಸಾರ್ವಜನಿಕರು ತಮ್ಮ ಸಮಸ್ಯೆಗಳು ಹಾಗೂ ಕುಂದುಕೊರತೆಗಳ ಕುರಿತು ಅರ್ಜಿ ಸಲ್ಲಿಸಿದಲ್ಲಿ, ಸಾಧ್ಯವಾದಷ್ಟು ಸ್ಥಳದಲ್ಲಿಯೇ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಸಾರ್ವಜನಿಕರು ತಮ್ಮ ಕುಂದು ಕೊರತೆಗಳ ಅಹವಾಲುಗಳನ್ನು ಇದೇ ವೇಳೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಸಿಪಿಐ ವಿಶ್ವನಾಥ್ ಹಿರೇಗೌಡರ್ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕೆ. ಶಾಂತಪ್ಪ ಅಧಿಕಾರ ಸ್ವೀಕಾರ

ರಾಯಚೂರು, ಸೆ.20: ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ಕೆ. ಶಾಂತಪ್ಪ ಅವರು ಭಾನುವಾರ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಅಧಿಕಾರ ಸ್ವೀಕರಿಸಿ ಕಾರ್ಯಾರಂಭ ಮಾಡಿದರು. ಇತ್ತೀಚೆಗೆ ಪ್ರಕಟವಾದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಪಟ್ಟಿಯಲ್ಲಿ ರಾಯಚೂರು ಜಿಲ್ಲೆಗೆ ಕೆ. ಶಾಂತಪ್ಪ ಅವರನ್ನು ನೇಮಕ ಮಾಡಲಾಗಿತ್ತು.



ಈ ಸಂದರ್ಭದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ನೂತನ ಜಿಲ್ಲಾಧ್ಯಕ್ಷ ಕೆ. ಶಾಂತಪ್ಪ ಅವರಿಗೆ ಶುಭ ಹಾರೈಸಿದರು.

ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ, ರಾಜ್ಯ ಯುವ ಕಾಂಗ್ರೆಸ್ ಮುಖಂಡ ರವಿ ಭೋಸರಾಜು, ಮುಖಂಡರಾದ ಜಿ. ಶಿವಮೂರ್ತಿ, ಅಮರೇಗೌಡ ಹಂಚಿನಾಳ, ರುದ್ರಪ್ಪ ಅಂಗಡಿ, ಎನ್. ಶ್ರೀನಿವಾಸರೆಡ್ಡಿ, ಆಂಜನೇಯ ಕುರುಬದೊಡ್ಡಿ, ಜಿ. ತಿಮ್ಮಾರೆಡ್ಡಿ, ಬಸವರಾಜ ಪಾಟೀಲ್ ಅತ್ತನೂರು, ತಾಯಣ್ಣಗೌಡ, ಮ್ಯಾದಾರ ಲಕ್ಷ್ಮಣ, ಜಾಫರ್ ಅಹ್ಮದ್ ಸೇರಿದಂತೆ ಪಕ್ಷದ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ನೆನಪು ಜಾರಿದಾಗ ನಿರ್ಲಕ್ಷ್ಯ ಬೇಡ ಅಲ್ಜೈಮರ್ ಬಗ್ಗೆ ಅರಿವು ಇರಲಿ!

ಮರೆವು ಮನುಷ್ಯನ ಬದುಕಿನ ಸಹಜ ಸಂಗಾತಿ. ಕೆಲವೊಮ್ಮೆ ಇಟ್ಟ ವಸ್ತು ಎಲ್ಲಿದೆ ಎಂಬುದು ನೆನಪಾಗುವುದಿಲ್ಲ. ಪರಿಚಿತ ವ್ಯಕ್ತಿಯ ಹೆಸರು ನಾಲಿಗೆಯ ತುದಿಗೆ ಬಂದು ಕ್ಷಣಕಾಲ ಮರೆಯಾಗುತ್ತದೆ. ನಿನ್ನೆ ನಡೆದ ಸಂಗತಿಯೊಂದು ಇಂದು ಸ್ಪಷ್ಟವಾಗಿ ನೆನಪಿಗೆ ಬಾರದಿರಬಹುದು. ಇಂತಹ ಸಣ್ಣಪುಟ್ಟ ಮರೆವು ಬದುಕಿನ ಸಾಮಾನ್ಯ ಭಾಗವಾಗಿರಬಹುದು. ಆದರೆ ಮರೆವು ನಿಧಾನವಾಗಿ ಬದುಕಿನ ದೈನಂದಿನ ಚಟುವಟಿಕೆಗಳನ್ನೇ ಅಸ್ತವ್ಯಸ್ತಗೊಳಿಸಲು ಆರಂಭಿಸಿದಾಗ ಅದನ್ನು "ವಯಸ್ಸಿನ ಪರಿಣಾಮ'' ಎಂದು ತಳ್ಳಿಹಾಕುವುದು ಸರಿಯಲ್ಲ. ನೆನಪು ಜಾರುವುದು ಒಂದು ಸಂಗತಿ. ನೆನಪಿನ ಜೊತೆಗೆ ಬದುಕಿನ ಸ್ವಾವಲಂಬನೆಯೇ ಜಾರುವುದು ಮತ್ತೊಂದು ಸಂಗತಿ. ಈ ವ್ಯತ್ಯಾಸವನ್ನು ಅರಿಯುವ ಜಾಗೃತಿಯೇ ವಿಶ್ವ ಅಲ್ಜೈಮರ್ ದಿನದ ಮಹತ್ವ.



ಸೆಪ್ಟೆಂಬರ್ 21ರಂದು ವಿಶ್ವ ಅಲ್ಜೈಮರ್ ದಿನ ಆಚರಿಸಲಾಗುತ್ತದೆ. ಅಸಾಮಾನ್ಯ ಮರೆವಿನ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು, ಕಾಯಿಲೆಗೆ ಸಂಬಂಧಿಸಿದ ತಪ್ಪು ಕಲ್ಪನೆ ಮತ್ತು ಸಾಮಾಜಿಕ ಕಳಂಕವನ್ನು ಕಡಿಮೆ ಮಾಡುವುದು ಹಾಗೂ ಅಗತ್ಯವಿದ್ದಾಗ ವೈದ್ಯಕೀಯ ನೆರವು ಪಡೆಯುವಂತೆ ಪ್ರೇರೇಪಿಸುವುದು ಇದರ ಪ್ರಮುಖ ಉದ್ದೇಶ. 1994ರಲ್ಲಿ ಮೊದಲ ವಿಶ್ವ ಅಲ್ಜೈಮರ್ ದಿನ ಆಚರಿಸಲಾಯಿತು. ನಂತರ 2012ರಿಂದ ಸೆಪ್ಟೆಂಬರ್ ತಿಂಗಳನ್ನು ವಿಶ್ವ ಅಲ್ಜೈಮರ್ ತಿಂಗಳಾಗಿ ಗುರುತಿಸಲಾಗುತ್ತಿದೆ. ಒಂದು ದಿನದ ಜಾಗೃತಿ ಕಾರ್ಯಕ್ರಮವಾಗಿ ಆರಂಭವಾದ ಪ್ರಯತ್ನ ಇಂದು ಬುದ್ಧಿಮಾಂದ್ಯತೆ ಮತ್ತು ಅದರ ಪರಿಣಾಮಗಳ ಕುರಿತು ಜಾಗತಿಕ ಅರಿವಿನ ಭಾಗವಾಗಿದೆ.

ಅಲ್ಜೈಮರ್ ಎಂಬುದು ಕೇವಲ "ಮರೆವಿನ ಕಾಯಿಲೆ'' ಎಂದು ಹೇಳಿ ಮುಗಿಸುವ ವಿಷಯವಲ್ಲ. ಇದು ಮೆದುಳಿನ ನರಕೋಶಗಳು ಮತ್ತು ಅವುಗಳ ನಡುವಿನ ಸಂಪರ್ಕಗಳಿಗೆ ಕ್ರಮೇಣ ಹಾನಿ ಉಂಟುಮಾಡುವ ನರಕ್ಷಯಕಾರಿ ಕಾಯಿಲೆ. ಇದರ ಪರಿಣಾಮವಾಗಿ ನೆನಪು, ಚಿಂತನೆ, ಭಾಷೆ, ಕಲಿಕೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯದಲ್ಲಿ ಕುಸಿತ ಕಾಣಿಸಿಕೊಳ್ಳಬಹುದು. ಬುದ್ಧಿಮಾಂದ್ಯತೆ ಹಲವು ಕಾರಣಗಳಿಂದ ಉಂಟಾಗುವ ವಿಶಾಲ ಸ್ಥಿತಿ. ಅದರ ಪ್ರಮುಖ ಕಾರಣಗಳಲ್ಲಿ ಅಲ್ಜೈಮರ್ ಒಂದಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ 2021ರಲ್ಲಿ ಜಗತ್ತಿನಾದ್ಯಂತ ಸುಮಾರು ಐದು ಕೋಟಿ ಎಪ್ಪತ್ತು ಲಕ್ಷ ಜನರು ಬುದ್ಧಿಮಾಂದ್ಯತೆಯೊಂದಿಗೆ ಬದುಕುತ್ತಿದ್ದರು. ಪ್ರತಿವರ್ಷ ಸುಮಾರು ಒಂದು ಕೋಟಿ ಹೊಸ ಪ್ರಕರಣಗಳು ದಾಖಲಾಗುತ್ತವೆ. ಈ ಅಂಕಿಅಂಶಗಳು ಸಮಸ್ಯೆಯ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳಲು ಸಾಕು.

ಹಾಗಾದರೆ ಎಚ್ಚರಿಕೆಯ ಗಂಟೆ ಯಾವಾಗ ಮೊಳಗುತ್ತದೆ? ನಿನ್ನೆ ಎಲ್ಲಿ ಕೀಲಿಯಿಟ್ಟೆ ಎಂಬುದು ಮರೆತು ನಂತರ ನೆನಪಾಗುವುದು ದೊಡ್ಡ ಆತಂಕದ ಕಾರಣವಲ್ಲ. ಆದರೆ ಇತ್ತೀಚೆಗೆ ನಡೆದ ಸಂಗತಿಗಳನ್ನು ಪದೇಪದೇ ಮರೆತುಕೊಳ್ಳುವುದು, ಒಂದೇ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳುವುದು, ಪರಿಚಿತ ವ್ಯಕ್ತಿಗಳನ್ನು ಗುರುತಿಸಲು ಕಷ್ಟಪಡುವುದು, ಪರಿಚಿತ ಸ್ಥಳದಲ್ಲಿಯೇ ದಾರಿ ತಪ್ಪುವುದು, ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸಲು ಕಷ್ಟಪಡುವುದು, ಸರಳವಾದ ದಿನನಿತ್ಯದ ಕೆಲಸಗಳ ಕ್ರಮವನ್ನೇ ಮರೆತುಕೊಳ್ಳುವುದು ಅಥವಾ ಮಾತನಾಡುವಾಗ ಸಾಮಾನ್ಯವಾಗಿ ಬಳಸುವ ಪದಗಳನ್ನು ಹುಡುಕಲು ಕಷ್ಟಪಡುವುದು ಗಮನಿಸಬೇಕಾದ ಬದಲಾವಣೆಗಳಾಗಬಹುದು. ಇವು ದಿನನಿತ್ಯದ ಬದುಕಿಗೆ ತೊಂದರೆ ಉಂಟುಮಾಡುತ್ತಿದ್ದರೆ ವೈದ್ಯಕೀಯ ಸಲಹೆ ಪಡೆಯುವುದು ಮುಖ್ಯ.

ಆದರೆ ಇಲ್ಲಿಯೂ ಒಂದು ಎಚ್ಚರಿಕೆ ಅಗತ್ಯ. ಪ್ರತಿಯೊಂದು ಮರೆವೂ ಅಲ್ಜೈಮರ್ ಅಲ್ಲ. ನಿದ್ರೆಯ ಕೊರತೆ, ಕೆಲವು ಔಷಧಿಗಳ ಪರಿಣಾಮ, ಖಿನ್ನತೆ, ಪೌಷ್ಟಿಕಾಂಶದ ಕೊರತೆ, ಥೈರಾಯ್ಡ್ ಸೇರಿದಂತೆ ಕೆಲವು ಆರೋಗ್ಯ ಸಮಸ್ಯೆಗಳು ಹಾಗೂ ಇತರ ಕಾರಣಗಳಿಂದಲೂ ಸ್ಮರಣಶಕ್ತಿ ಮತ್ತು ಚಿಂತನೆಯ ಸಾಮರ್ಥ್ಯದಲ್ಲಿ ಬದಲಾವಣೆ ಕಾಣಿಸಿಕೊಳ್ಳಬಹುದು. ಆದ್ದರಿಂದ ಮನೆಯವರು ತಾವೇ ಕಾಯಿಲೆಯ ಹೆಸರನ್ನು ನಿರ್ಧರಿಸಬಾರದು. ವೈದ್ಯರ ಪರಿಶೀಲನೆಗೆ ಒಳಪಡಿಸುವುದು ಜಾಣ್ಮೆ. ಕಾರಣವನ್ನು ಸರಿಯಾಗಿ ಗುರುತಿಸಿದಾಗ ಸೂಕ್ತ ನೆರವು ಮತ್ತು ಆರೈಕೆಯ ದಾರಿಯೂ ಸ್ಪಷ್ಟವಾಗುತ್ತದೆ.

ವಯಸ್ಸು ಬುದ್ಧಿಮಾಂದ್ಯತೆಗೆ ಪ್ರಮುಖ ಅಪಾಯದ ಅಂಶವಾದರೂ, "ವಯಸ್ಸಾದರೆ ಅಲ್ಜೈಮರ್ ಆಗಲೇಬೇಕು'' ಎಂಬ ಕಲ್ಪನೆ ತಪ್ಪು. ದೈಹಿಕ ಚಟುವಟಿಕೆ, ಆರೋಗ್ಯಕರ ಆಹಾರ, ರಕ್ತದೊತ್ತಡ ಮತ್ತು ರಕ್ತದಲ್ಲಿನ ಸಕ್ಕರೆಯ ನಿಯಂತ್ರಣ, ಧೂಮಪಾನದಿಂದ ದೂರವಿರುವುದು, ಹಾನಿಕಾರಕ ಮದ್ಯಪಾನ ತಪ್ಪಿಸುವುದು, ಸಾಮಾಜಿಕವಾಗಿ ಸಕ್ರಿಯವಾಗಿರುವುದು ಹಾಗೂ ಮನಸ್ಸನ್ನು ಚುರುಕಾಗಿಡುವ ಚಟುವಟಿಕೆಗಳು ಅರಿವಿನ ಕುಸಿತದ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡಬಹುದು. ಓದುವುದು, ಬರೆಯುವುದು, ಸಂಗೀತ, ತೋಟಗಾರಿಕೆ, ಹೊಸ ವಿಷಯ ಕಲಿಯುವುದು, ಸ್ನೇಹಿತರೊಂದಿಗೆ ಸಂಭಾಷಣೆ ನಡೆಸುವುದು ಮುಂತಾದವು ಬದುಕಿಗೆ ಚೈತನ್ಯ ನೀಡುತ್ತವೆ. ಆದರೆ ಇವು ಅಲ್ಜೈಮರ್ ಅನ್ನು ಖಚಿತವಾಗಿ ತಡೆಯುತ್ತವೆ ಎಂದು ಹೇಳುವುದು ವೈಜ್ಞಾನಿಕವಾಗಿ ಸರಿಯಲ್ಲ.

ಅಲ್ಜೈಮರ್ ಎದುರಿಸುವ ಕುಟುಂಬದ ನಿಜವಾದ ಪರೀಕ್ಷೆ ಕಾಯಿಲೆಯ ಹೆಸರಿನಲ್ಲಿ ಮಾತ್ರ ಇರುವುದಿಲ್ಲ. ಅದು ನಮ್ಮ ಸಹನೆಯಲ್ಲಿದೆ. ಒಂದೇ ಪ್ರಶ್ನೆಯನ್ನು ಹಿರಿಯರು ಹಲವು ಬಾರಿ ಕೇಳಿದಾಗ "ಎಷ್ಟು ಬಾರಿ ಹೇಳಬೇಕು?'' ಎಂದು ಕೋಪಗೊಳ್ಳುವ ಬದಲು ಮತ್ತೊಮ್ಮೆ ಶಾಂತವಾಗಿ ಉತ್ತರಿಸುವ ಮನಸ್ಸು ಬೇಕು. ಅವರು ತಪ್ಪಾಗಿ ನೆನಪಿಸಿಕೊಂಡಾಗ ವಾದಿಸಿ ಗೆಲ್ಲುವುದಕ್ಕಿಂತ ಅವರ ಆತಂಕವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಮನೆಯ ವಾತಾವರಣ ಸುರಕ್ಷಿತವಾಗಿರಬೇಕು. ಔಷಧಿ, ಬೆಂಕಿ, ವಿದ್ಯುತ್, ಹೊರಗೆ ಹೋಗುವ ಸಂದರ್ಭ ಮತ್ತು ಹಣಕಾಸಿನ ವ್ಯವಹಾರಗಳಲ್ಲಿ ಸೂಕ್ತ ಮುನ್ನೆಚ್ಚರಿಕೆ ಅಗತ್ಯ.

ಇಲ್ಲಿ ಒಂದು ಸೂಕ್ಷ್ಮ ಮಾನವೀಯ ಪ್ರಶ್ನೆಯೂ ಇದೆ. ನೆನಪು ಕಡಿಮೆಯಾದ ವ್ಯಕ್ತಿಯ ಗೌರವ ಕಡಿಮೆಯಾಗಬೇಕೇ? ಖಂಡಿತವಾಗಿಯೂ ಇಲ್ಲ. ವ್ಯಕ್ತಿಯ ನೆನಪು ಕ್ಷೀಣಿಸಬಹುದು, ಆದರೆ ಅವರ ಬದುಕಿನ ಮೌಲ್ಯ ಕ್ಷೀಣಿಸುವುದಿಲ್ಲ. ಅವರು ನಿನ್ನೆ ಹೇಳಿದ ಮಾತನ್ನು ಇಂದು ಮರೆತಿರಬಹುದು. ಆದರೆ ಅವರು ಬದುಕಿದ ದಶಕಗಳ ಪ್ರೀತಿ, ಪರಿಶ್ರಮ, ಸಂಬಂಧ ಮತ್ತು ಕೊಡುಗೆಗಳನ್ನು ನಾವು ಮರೆಯಬಾರದು. ಕಾಯಿಲೆ ವ್ಯಕ್ತಿಯ ಪರಿಚಯವನ್ನು ಬದಲಾಯಿಸುವುದಿಲ್ಲ. ನಮ್ಮ ದೃಷ್ಟಿಕೋನವೇ ಬದಲಾಗಬೇಕಾಗಿದೆ.

ಆರೈಕೆ ಮಾಡುವವರ ನೋವೂ ಗಮನಾರ್ಹ. ದೀರ್ಘಕಾಲದ ಆರೈಕೆ ದೈಹಿಕ, ಭಾವನಾತ್ಮಕ ಮತ್ತು ಆರ್ಥಿಕ ಒತ್ತಡ ತರಬಹುದು. ಆದ್ದರಿಂದ ಮನೆಯ ಒಬ್ಬರ ಮೇಲಷ್ಟೇ ಸಂಪೂರ್ಣ ಹೊಣೆ ಹಾಕದೆ ಕುಟುಂಬದವರು ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು. ಅಗತ್ಯವಿದ್ದಾಗ ವೈದ್ಯರು, ಆರೋಗ್ಯ ಕಾರ್ಯಕರ್ತರು ಮತ್ತು ಲಭ್ಯವಿರುವ ಆರೈಕೆ ಸೇವೆಗಳ ನೆರವು ಪಡೆಯಬೇಕು. ಆರೈಕೆ ಮಾಡುವವನ ಕೈಯೂ ಹಿಡಿಯಬೇಕಾದಾಗ ಮಾತ್ರ ಆರೈಕೆ ಸಂಪೂರ್ಣವಾಗುತ್ತದೆ.

ಮರೆವು ಬಂದಾಗ ಭಯಪಡಬೇಕಿಲ್ಲ. ಆದರೆ ಅಸಾಮಾನ್ಯ ಮರೆವಿಗೆ ನಿರ್ಲಕ್ಷ್ಯ ತೋರಬಾರದು. "ವಯಸ್ಸಾಗಿದೆ, ಹೀಗೇ ಇರುತ್ತದೆ'' ಎಂಬ ಮಾತಿನ ಹಿಂದೆ ಸಮಸ್ಯೆಯನ್ನು ಮುಚ್ಚಿಡಬಾರದು. ಸಮಯಕ್ಕೆ ಗಮನಿಸಿದರೆ ಕಾರಣವನ್ನು ತಿಳಿದುಕೊಳ್ಳಲು ಮತ್ತು ಅಗತ್ಯ ಬೆಂಬಲ ಒದಗಿಸಲು ಅವಕಾಶ ಸಿಗುತ್ತದೆ. ವಿಶ್ವ ಅಲ್ಜೈಮರ್ ದಿನ ನಮಗೆ ನೆನಪಿಸುವುದು ಒಂದೇ ಸತ್ಯ ,ನೆನಪು ಮಸುಕಾದರೂ ಸಂಬಂಧ ಮಸುಕಾಗಬಾರದು. ಮನಸ್ಸಿನ ಪುಟಗಳು ಖಾಲಿಯಾಗತೊಡಗಿದಾಗಲೂ ಮಾನವೀಯತೆಯ ಅಕ್ಷರಗಳು ಅಳಿಸಿಹೋಗದಂತೆ ಕಾಪಾಡುವುದು ನಮ್ಮ ಹೊಣೆ.



-ಕಾಶಿಗೌ
ಸಾಹಿತಿ, ನಿವೃತ್ತ ಪ್ರಾಂಶುಪಾಲರು,
ಶಿವಶಕ್ತಿ ನಿಲಯ ಜೆಎಂಸಿ ಲೇಔಟ್ ,
ಮೈಸೂರು.

Printed By and Published By Tunga Bimba Printers & Publishers 4-4-401/94, Gulbraga Builders Layout, Opp Navodaya Hospital, Yeragera Road, Raichur-584103. Editor: Gururaja.K